(5)

ಅಚಲ

ಡಿಸೆಂಬರ್ 1999

ತಿಂಗಳ ಪತ್ರಿಕೆ

ಒಳಗೇನಿದೆ ?

ಜಾಗೃತಿ

· ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 13 ಸಂಚಿಕೆ - 4

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by Dr. N. Gayathri

Published by Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 13 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಈ ಸಹಸ್ರಮಾನದ ಕೊನೆಯ 'ಅಚಲ' ಸಂಚಿಕೆ ನಿಮ್ಮನ್ನು ಮತ್ತು ನಮ್ಮನ್ನು ಇನ್ನೂ ಹತ್ತಿರಕ್ಕೆ ತರಲಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳಿಗೆ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)

ರೂ. 75/- (ಸಂಸ್ಥೆಗಳಿಗೆ)

ಆಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)

ರೂ. 400/- (ಸಂಸ್ಥೆಗಳಿಗೆ)

'ಅಚಲ' ಪತ್ರಿಕೆಗೆ ಚಂದಾದಾರರಾಗಿರಿ. ಚಂದಾ ನವೀಕರಿಸಿ

ಮತ್ತು

ನಿಮ್ಮ ಆಪ್ತರನ್ನೂ ಚಂದಾದಾರರನ್ನಾಗಿಸಿ.

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಹೊಸ ಸಂವತ್ಸರದ ಹೊಸ್ತಿಲಲ್ಲಿ....

ಅಚಲ ಚಂದಾದಾರರಿಗೆಲ್ಲಾ ಹೊಸ ವರ್ಷದ ಶುಭಾಶಯಗಳು. ಇಪ್ಪತ್ತನೇ ಶತಮಾನದ ಅಂತ್ಯದಲ್ಲಿ ನಿಂತು ಈ ಒಂದು ಶತಮಾನದ ದೀರ್ಘಗತಿಯ ಮೇಲೆ ಕಣ್ಣು ಹಾಯಿಸಿದಾಗ ಮಹಿಳೆಯೇ ಸರ್ವಾಂತರ್ಯಾಮಿಯಾಗಿ ವ್ಯಾಪಿಸಿಕೊಂಡ ಅವಧಿಯಿದು ಎಂಬುದು ಗೋಚರವಾಗುತ್ತದೆ. ಭಾರತದಲ್ಲಿ ಸ್ತ್ರೀ-ಪುರುಷ ಸಮಾನತೆಯು ವಾಸ್ತವದಲ್ಲಿ ದಕ್ಕಿದ್ದು ಅಲ್ಪವಾದರೂ ಅಂತಹ ಒಂದು ಚರ್ಚೆ ವಿಪುಲವಾಗಿ ನಡೆದ ಅವಧಿಯಿದು. ಈ ಸಂದರ್ಭದಲ್ಲಿ ಸುಧಾರಣೆ, ಪುನರುತ್ಥಾನ, ರಾಷ್ಟ್ರೀಯತಾವಾದ, ಪಾಶ್ಚಾತ್ಯೀಕರಣ, ಆಧುನಿಕತೆ ಮುಂತಾದ ವಿವಿಧ ಚಿಂತನೆ, ಸಿದ್ಧಾಂತಗಳಡಿಯಲ್ಲಿ ಭಾರತೀಯ ಹೆಣ್ಣು ಚರ್ಚೆಯ ವಿಷಯವಾದಳು. ಈ ದೇಶದ ಆಧುನಿಕತೆ ಮತ್ತು ಸಾಂಪ್ರದಾಯಿಕತೆಯನ್ನು ಅಳೆಯುವಲ್ಲಿ ಭಾರತೀಯ ಹೆಣ್ಣಿನ ಸ್ಥಿತಿಗತಿ ಮತ್ತು ಸ್ಥಾನಮಾನಗಳು ಮಾರ್ಗದರ್ಶಕ ಸೂತ್ರಗಳಾದವು.

ಇಪ್ಪತ್ತನೆಯ ಶತಮಾನವು ಭಾರತದಲ್ಲಿ ಕಂಡ ಹಲವಾರು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಚಳುವಳಿಗಳಿಗೆ ಹೆಣ್ಣು ಪ್ರಮುಖ ಆಸಕ್ತಿಯಾದಳು. ಈ ಶತಮಾನದ ಆರಂಭದ ಸಮಾಜ ಸುಧಾರಣ ಚಳುವಳಿ, ಸ್ವಾತಂತ್ರ್ಯದ ಚಳುವಳಿ, ಬಂಗಾಲದ ತೇಭಾಗ ಚಳುವಳಿ, ಆಂಧ್ರದ ತೆಲಂಗಾಣ ಮತ್ತು ತಮಿಳುನಾಡಿನ ದ್ರಾವಿಡ ಚಳುವಳಿಗಳು ಹೆಣ್ಣನ್ನು ಒಳಗೊಂಡ ಮತ್ತು ಬಳಸಿಕೊಂಡ ರೀತಿಯಲ್ಲಿ ಮತ್ತು ಸ್ವರೂಪದಲ್ಲಿ ಭಿನ್ನತೆಯಿದ್ದರೂ ಮಹಿಳೆಯನ್ನು ಕುರಿತು ಚಿಂತನೆಗೆ ಮತ್ತು ಮಹಿಳೆಯರ ಕ್ರಿಯಾಶೀಲತೆಗೆ ವ್ಯಾಪಕವಾದ ಹರವನ್ನು ಒದಗಿಸಿದವು. ಈ ಎಲ್ಲ ಚಳುವಳಿಯ ಅನುಭವಗಳು ಭಾರತೀಯ ಹೆಣ್ಣು ಮತ್ತು ಗಂಡಿನ ಮಾನಸಿಕ ಲೋಕದಲ್ಲಿ 'ಹೊಸ ಹೆಣ್ಣಿನ ಪರಿಕಲ್ಪನೆ'ಗೆ ಸ್ವಲ್ಪ ಮಟ್ಟಿಗಾದರೂ ಕಾರಣವಾಗಿದೆ ಯೆಂಬುದು ವಾಸ್ತವ ಸತ್ಯವಾಗಿದೆ.

ಆರಂಭದಲ್ಲಿ ಒಂದು ಚಳುವಳಿಯಾಗಿ ಆರಂಭವಾದ ಸ್ತ್ರೀ ಶಿಕ್ಷಣ ನಂತರದ ದಿನಗಳಲ್ಲಿ ತನ್ನ ಬಿರುಸನ್ನು ಕಳೆದುಕೊಂಡಿತು. ಒಂದು ದೀರ್ಘ ಶತಕದ ನಂತರವೂ ಇಂದು ದೇಶದಲ್ಲಿ ಉಳಿದಿರುವ ನಿರಕ್ಷರಿಗಳ ಸಂಖ್ಯೆಯನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಆದರೂ ಕಳೆದ ದಶಕಗಳಲ್ಲಿ ದೇಶದಲ್ಲಿ ನಡೆಯುತ್ತಿರುವ ಸಾಕ್ಷರತಾ ಆಂದೋಳನದಲ್ಲಿಯೂ ಮತ್ತೆ ಮಹಿಳೆಯರದೇ ಮೇಲುಗೈ. ಕೇವಲ ಉಚ್ಚ, ಜಾತಿ, ವರ್ಗಗಳ ಮಹಿಳೆಯರಿಗೆ ಲಭ್ಯವಿದ್ದ ವಿದ್ಯಾಭ್ಯಾಸದ ಅವಕಾಶಗಳು ಇಂದು ಸಾರ್ವತ್ರಿಕ ಸ್ವರೂಪ ಪಡೆದಿರುವುದು ಒಂದು ಗುಣಾಂಶವಾಗಿದೆ. ಶಿಕ್ಷಣದಿಂದ ಮಹಿಳೆಯರಲ್ಲಿ ಮೂಡಿದ ಹೊಸಬೆಳಕು ಅವಳನ್ನು 'ಹೊಸ ಮಹಿಳೆ'ಯಾಗಿ ಮಾಡಿದೆ. ಮನೆಯ ನಾಲ್ಕು ಗೋಡೆಗಳ ಬಂಧನದಾಚೆಗೆ ಮಹಿಳೆ ಇಂದು ಕೌಟುಂಬಿಕ ನೆಲೆಯ ಔಚಿತ್ಯಗಳನ್ನು ಪ್ರಶ್ನಿಸುತ್ತಲೇ ಹೆಚ್ಚು ಸಾರ್ವಜನಿಕ ರಂಗಕ್ಕೆ ತೆರೆದುಕೊಳ್ಳುತ್ತಿದ್ದಾಳೆ. ರಾಜಕೀಯ ಕ್ಷೇತ್ರಕ್ಕೂ ಕಾಲಿಡುತ್ತಿದ್ದಾಳೆ.

ಸ್ವಾತಂತ್ರ್ಯಪೂರ್ವದಿನಗಳಲ್ಲಿ, ಪುರುಷರೊಂದಿಗೆ ಸಮಸಮವಾಗಿ ರಾಜಕೀಯ ಚಳುವಳಿಗಳಲ್ಲಿ ಭಾಗವಹಿಸಿದ ಭಾರತೀಯ ಮಹಿಳೆಯರು ನಂತರ ರಾಜಕೀಯದಿಂದ ದೂರ ಸರಿದದ್ದು ಒಂದು ವಿಸ್ಮಯದ ಸಂಗತಿ. ಅವರು ರಾಜಕೀಯ ಹೋರಾಟಗಳಲ್ಲಿ ತೊಡಗುವುದಕ್ಕಿಂತ ಹೆಚ್ಚಾಗಿ ಸ್ತ್ರೀ ಸಮಾನತಾ ಹೋರಾಟಗಳಲ್ಲಿ, ಮಹಿಳೆಯರ ಸಂಘಟನೆಗಳಲ್ಲಿ ಹೆಚ್ಚು ಕ್ರಿಯಾಶೀಲರಾದರು. ರಾಜಕೀಯವೇ ಹೆಚ್ಚು ಸಂಕೀರ್ಣವಾದದ್ದು ಇದಕ್ಕೆ ಕಾರಣವಿರಬೇಕು. ಧನಬಲ, ತೋಳ್ಬಲಗಳಲ್ಲದೆ ಜಾತಿ, ಭಾಷೆಗಳ ರಾಜಕೀಯದಲ್ಲಿ ತನ್ನ ಶತೃವನ್ನು ಗುರುತಿಕೊಳ್ಳುವುದು ಮಹಿಳೆಗೆ ಕಷ್ಟವಾಯಿತು. ಇಷ್ಟಾದರೂ ರಾಜಕೀಯ ಕುಟುಂಬಗಳಿಂದಲೇ ಬಂದ ಮಹಿಳಾ ರಾಜಕಾರಣಿಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚು ಪ್ರಖರವಾಗಿ ತೋರಿಸಿರುವುದು ಕಂಡು ಬರುತ್ತದೆ. ಇಂದಿರಾಗಾಂಧಿಯಂತಹ ಅಂತರಾಷ್ಟ್ರೀಯ ಮನ್ನಣೆಯ ನಾಯಕಿಯರ ಹಿಂದೆ ಈ ಅಂಶ ಕೆಲಸ ಮಾಡಿದೆ.

ಸಂಪಾದಕೀಯ

ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರಿಗೆ ರಾಜಕೀಯ ಅಧಿಕಾರವನ್ನು ಕಲ್ಪಿಸಿಕೊಡುವ ಯತ್ನ ಗ್ರಾಮ ಪಂಚಾಯಿತಿಯ ಹಂತದಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ನಡೆದ ಚುನಾವಣೆಗಳಲ್ಲಿ ಶೇ. 40ಕ್ಕಿಂತ ಹೆಚ್ಚು ಮಹಿಳೆಯರು ಚುನಾಯಿತರಾಗಿರುವುದು ದಾಖಲೆಯಷ್ಟೇ ಅಲ್ಲ, ಅಧಿಕಾರ ಪಡೆಯುವಲ್ಲಿ ಮಹಿಳೆಯ ಪ್ರಕ್ರಿಯೆಗೆ ಸಿಕ್ಕ ಚಾಲನೆಯಾಗಿದೆ. ಗ್ರಾಮ ಪಂಚಾಯಿತಿಯಷ್ಟೇ ಅಲ್ಲ ಎಲ್ಲ ಸಹಕಾರ ಸಂಘ ಸಂಸ್ಥೆಗಳಲ್ಲೂ ಮಹಿಳೆಯರಿಗೆ ಒದಗಿಸಲಾಗಿರುವ ಮೀಸಲಾತಿ ಮಹಿಳೆಯರ ಸಾರ್ವಜನಿಕ ಬದುಕನ್ನು ಗಣನೆಗೆ ತಂದುಕೊಂಡಿದೆ. ಕಳೆದ ನಾಲ್ಕೈದು ವರ್ಷಗಳಲ್ಲಂತೂ ಭಾರತದ ರಾಜಕೀಯ ಭೂಪಟದಲ್ಲಿ ನಾಯಕಿಯರೇ ಬಹುಮುಖ್ಯವಾಗಿ ಕಾಣಿಸಿಕೊಂಡು ಅಧಿಕಾರದ ಸೂತ್ರಗಳನ್ನು ಆಡಿಸುತ್ತಿರುವುದು ಕಂಡು ಬರುತ್ತಿದೆ. ಜಯಲಲಿತಾ, ಮಮತಾ ಬ್ಯಾನರ್ಜಿ, ರಾಬ್ರಿದೇವಿ, ಉಮಾಭಾರತಿ ಮುಂತಾದ ನಾಯಕಮಣಿಗಳು ತಮ್ಮ ತಮ್ಮ ಕ್ಷೇತ್ರದಲ್ಲಿದ್ದುಕೊಂಡೇ ರಾಷ್ಟ್ರದ ರಾಜಕೀಯದ ಮೇಲೆ ತಮ್ಮ ಪ್ರಭಾವ ಬೀರುತ್ತಿದ್ದಾರೆ. ಈ ಶತಮಾನದಂತ್ಯದ ಸಾರ್ವತ್ರಿಕ ಸುನಾವಣೆಯಲ್ಲಿ ಬಳ್ಳಾರಿಯಿಂದ ಸ್ಪರ್ಧಿಸಿದ ಸುಷ್ಮಾಸ್ವರಾಜ್ ಮತ್ತು ಸೋನಿಯಗಾಂಧಿ ಅವರ ನಡುವಿನ ಸ್ಪರ್ಧೆ ಇಡೀ ವಿಶ್ವದ ಗಮನ ಸೆಳೆದು ಭಾರತದ ರಾಜಕೀಯ ನಕ್ಷೆಯಲ್ಲಿ ಮಹಿಳೆಯರ ಪಾತ್ರವನ್ನು ಗುರುತಿಸುವಂತೆ ಮಾಡಿತು.

ಅಂತರರಾಷ್ಟ್ರೀಯ ನೆಲೆಯಲ್ಲಿ ಉಂಟಾದ ರಾಜಕೀಯ ಬದಲಾವಣೆಗಳು ಭಾರತೀಯ ಹೆಣ್ಣಿನ ಬದುಕಿನ ಮೇಲೂ ಮಹತ್ತರ ಪ್ರಭಾವ ಬೀರಿವೆ. ಇಂದು ನಮ್ಮ ಭಾರತೀಯ ಹೆಣ್ಣಿನ ಭವಿಷ್ಯವನ್ನು ನಿರ್ಧರಿಸುವವರು ಕೇವಲ ನಮ್ಮ ಸಂಸತ್ತಿನಲ್ಲಿ ಕುಳಿತಿರುವ ಅಧಿಕಾರಸ್ಥರು ಮಾತ್ರವಾಗಿರದೆ ವಿಶ್ವದ ಮಾರುಕಟ್ಟೆಯ ಗುತ್ತಿಗೆ ಹಿಡಿದ ರಾಜಕಾರಣಿಗಳೂ ನಿಯಂತ್ರಿಸುತ್ತಿದ್ದಾರೆ. ವಿಶ್ವದ ರಾಜಕಾರಣದಿಂದ ನೇರವಾಗಿ ಪ್ರಭಾವ ಎದುರಿಸಬೇಕಾಗಿ ಬಂದದ್ದರಿಂದ ಉದಾರೀಕರಣ, ಜಾಗತೀಕರಣದ ಹೆಸರಿನಲ್ಲಿ ನಡೆಯುತ್ತಿರುವ ಸರ್ಕಾರಿ ಯೋಜನೆಗಳು ಮಹಿಳೆಯರ ಸಂಕೋಲೆಯನ್ನು ಇನ್ನೂ ಹೆಚ್ಚು ಬಿಗಿಯಾಗಿಸಿವೆ. ಈಗ ಮನುಷ್ಯನ ಅಸ್ತಿತ್ವವನ್ನು ನಿರ್ಣಯಿಸುವ ಏಕೈಕ ಅಂಶವೆಂದರೆ ಅಂತರರಾಷ್ಟ್ರೀಯ ಮಾರುಕಟ್ಟೆ. 'ಹೆಣ್ಣು' ಈ ಹಿನ್ನೆಲೆಯಲ್ಲಿ ಮಾರುಕಟ್ಟೆಯ 'ಸರಕು' ಆಗಿ ಕಾಣಿಸಲ್ಪಡುತ್ತಿದ್ದಾಳೆ. ಗೋವಾ, ಕೋವಲಂ ಸಮುದ್ರ ದಂಡೆಗಳಲ್ಲಿ ಪ್ರವಾಸೋದ್ಯಮಗಳು ಲೈಂಗಿಕ ಪ್ರವಾಸೋದ್ಯಮಗಳಾಗಿವೆ. ಖಜುರಾಹೋದಲ್ಲಿ ನಿರ್ಮಿಸಬೇಕೆಂದಿರುವ ಕ್ಯಾಸಿನೋಗಳು ಏನನ್ನು ಬಿಂಬಿಸುತ್ತದೆ? ಅಧಿಕಾರ ಮತ್ತು ಹಣದ ಅಮಲು ಎರಡೂ ಸೇರಿರುವ ಮೇಲ್ವರ್ಗದ ಜನ ಇಂದು ಹರಡುತ್ತಿರುವ ಕುಡಿತ ಮತ್ತು ಬಂದೂಕಿನ ಸಂಸ್ಕೃತಿಗೆ ಜೆಸ್ಸಿಕಾಲಾಲ್‌ಳ ಕೊಲೆಯೇ ಉತ್ತಮ ನಿದರ್ಶನ. ಯುವಕರ ಚುಡಾಯಿಸುವಿಕೆ ಮತ್ತು ಲೈಂಗಿಕ ಕಿರುಕುಳಗಳಿಗೆ ಬಲಿಯಾದ ತಮಿಳುನಾಡಿನ ಮತ್ತು ಮಧ್ಯಪ್ರದೇಶದ ವಿದ್ಯಾರ್ಥಿನಿಯರು ಇಂದು ನಮ್ಮ ದೇಶ ಪ್ರತಿನಿಧಿಸುತ್ತಿರುವ ಕೊಳೆತ ಮೌಲ್ಯಗಳ ಪ್ರತಿಬಿಂಬವಾಗಿದ್ದಾರೆ.

ಇಷ್ಟೆಲ್ಲ ನಿರಾಶಾದಾಯಕ ಚಿತ್ರದ ನಡುವೆಯೂ ಭಾರತೀಯ ಹೆಣ್ಣು ತನ್ನ ಮುಂದಿರುವ ಅವಘಡಗಳನ್ನು ದಾಟಿಕೊಂಡು ವಿದ್ಯೆ, ಉದ್ಯೋಗ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ಒತ್ತಲು ಪ್ರಯತ್ನಿಸುತ್ತಿದ್ದಾಳೆ. ಮಹಿಳಾ ಹೋರಾಟದಿಂದ ದೊರಕಿರುವ ಮೀಸಲಾತಿಯ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾಳೆ. ಆದರೆ ಈ ಹಾದಿ ಹೂವಿನ ಹಾಸಿಗೆಯಲ್ಲ. ಉದ್ಯೋಗದ ಮೀಸಲಾತಿಯಿಂದಾಗಿ ಸಾರಿಗೆ, ಅರಣ್ಯ ಇಲಾಖೆ, ಪೋಲಿಸ್ ಮುಂತಾದ ಕ್ಷೇತ್ರಗಳಲ್ಲಿ ಅವಳು ಹೊಸ ಹೊಸ ಸವಾಲುಗಳನ್ನು ಎದುರಿಸಬೇಕಾಗಿದೆ. ತಮ್ಮ ಉದ್ಯೋಗದ ಅವಕಾಶಗಳನ್ನು ಕಸಿದುಕೊಳ್ಳುವ ಮಹಿಳೆಯರನ್ನು ಕುರಿತಂತೆ ಪುರಷ ಸಹೋದ್ಯೋಗಿಗಳು ಕೆಲವೊಮ್ಮೆ ತಳೆಯುವ ನಿಲುವು ಆತಂಕಕಾರಿಯಾದುದು. ಹಿಂದೆಂದಿಗಿಂತ ಹೆಚ್ಚಾಗಿ ಇಂದು ದುಡಿಯುವ ಕ್ಷೇತ್ರಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಕಿರುಕುಳ, ಅವಮಾನ, ದೌರ್ಜನ್ಯಗಳಿಗೆ ಪುರುಷರ ಈ ಧೋರಣೆಯೂ ಒಂದು ಮುಖ್ಯ ಕಾರಣವಾಗಿದೆ. ಈ ಎಲ್ಲ ಒತ್ತಡಗಳ ಬೆನ್ನಲ್ಲೇ ಮುಂದಿನ ಸಹಸ್ರಮಾನದ ಮಹಿಳೆ ಮುನ್ನಡೆಯಬೇಕಾಗಿದೆ.

ಎನ್. ಗಾಯತ್ರಿ.

ಹೊಸ ಸಹಸ್ರಮಾನದಲ್ಲಿ ಭಾರತೀಯ ಮಹಿಳೆಯರ ಭವಿಷ್ಯ

- ಮಧುಕಿಶ್ವರ್

ಭಾರತದ ಸಮಸ್ಯೆಗಳ ಅಗಾಧತೆಯನ್ನು ನೋಡಿದಾಗ, ಬಹಳ ಜನರಿಗಾಗುವಂತೆ ನನಗೂ ಮನಸ್ಸು ತುಂಬಿ ಬರುತ್ತದೆ. ಭಾರತದ ಭವಿಷ್ಯವನ್ನು ಮಹಿಳೆಯರ ದೃಷ್ಟಿ ಕೋಣದಿಂದಲೇ ನೋಡಿದಾಗ ಮೂಡುವ ಚಿತ್ರವಿದು.

ಭಾರತದ ಮಹಿಳೆಯರಿಗೆ ಎರಡನೆಯ ಸಹಸ್ರಮಾನದ ಆರಂಭವೇ ಬಹಳ ಕಠಿಣವಾಗಿತ್ತು. ಕ್ರಿ.ಶ. 1000 ದಿಂದ 2000ದವರೆಗೂ ಭಾರತದ ಮೇಲೆ ಹೊರಗಿನವರ ದಾಳಿಯೇ ದಾಳಿ. ಟರ್ಕರು, ಮಂಗೋಲಿಯನ್ನರು, ಆಫ್‌ಘನ್ನರು, ಮೊಘಲರು ಹಾಗು ಕೊನೆಗೆ ಬ್ರಿಟಿಷರು - ಒಬ್ಬರೆ ಇಬ್ಬರೇ!

ಸಮಾಜದಲ್ಲಿ ಹಿಂಸೆಯದೇ ಮೇಲುಗೈಯಾದಾಗ, ಮಹಿಳೆಯರು ಸಾಮಾಜಿಕ ಹಾಗೂ ರಾಜಕೀಯ ಚಟುವಟಿಕೆಗಳಿಂದ ಹಿಂದಕ್ಕೆ ಸರಿದು ಬಿಡುತ್ತಾರೆ ಎಂದು ಇತಿಹಾಸ ಹೇಳುತ್ತದೆ. ಕ್ಷೇಮ, ಸುರಕ್ಷತೆಗಳಿಂದಾಗಿ ಪುರುಷರ ಮೇಲೆ ಅವರ ಅವಲಂಬನೆ ಹೆಚ್ಚುತ್ತದೆ. ಅವರ ಹಕ್ಕುಗಳು ಕಟ್ಟುಪಾಡುಗಳಿಗೆ ಒಳಗಾಗುತ್ತವೆ; ಅವರ ಜೀವನ ಮೌಲ್ಯವನ್ನೇ ಕಳೆದುಕೊಳ್ಳುತ್ತವೆ.

ಯಾವುದೇ ಸಮಾಜ, ಸಮುದಾಯ ಅಥವಾ ಗುಂಪು ಹಿಂಸೆಯಲ್ಲೇ ಹೆಚ್ಚಾಗಿ ತೊಡಗಿದ್ದರೆ, ಅದು ಗಂಡು ಸಂತಾನವನ್ನೇ ಬಯಸುವಂಥ ಮತ್ತು ಪುರುಷಪ್ರಾಧಾನ್ಯತೆಯ ಸಂಸ್ಕೃತಿಯತ್ತಲೇ ವಾಲುತ್ತದೆ ಎಂದು ಇತಿಹಾಸ ತಿಳಿಸುತ್ತದೆ. ಹೀಗಿರುವಾಗ, ಬಹಳಷ್ಟು ಭಾರತೀಯ ಮಹಿಳೆಯರು ಕೇವಲ ತಮ್ಮ ಕುಟುಂಬಗಳನ್ನು ನಡೆಸಬೇಕು ಎಂಬ ಕಾರಣಕ್ಕಾಗಿ ಅರೆಹೊಟ್ಟೆಗೆ ಅಪೌಷ್ಟಿಕ ಆಹಾರ ತಿನ್ನುತ್ತಾ, ಕಟ್ಟು ಪಾಡುಗಳ ನಿರಂತರ ಗುಲಾಮಗಿರಿಯ ಜೀವನವನ್ನು ಅಮಾನವೀಯ ಸ್ಥಿತಿಗಳನ್ನು ಅನುಭವಿಸುತ್ತ ಬದುಕುತ್ತಿದ್ದಾರೆ ಎಂದರೆ ಆಶ್ಚರ್ಯವೇನಿಲ್ಲ. ಇಷ್ಟೆಲ್ಲದರ ನಡುವೆ ಅವರ ಕುಟುಂಬದವರೇ ಅವರನ್ನು 'ಬೇಡದ ಹೊರೆ'ಯಂತೆ ನೋಡುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ, ಇಲ್ಲಿನ ಬಡ ಹಳ್ಳಿಗಳಲ್ಲಿ ಹಾಗೂ ಪಟ್ಟಣದ ಕೊಳೆಗೇರಿಗಳಲ್ಲಿ ಬದುಕುತ್ತಿರುವ ಹೆಣ್ಣುಮಕ್ಕಳ ಜೀವನದ ಸುರಕ್ಷಿತವಾದುದಂತೂ ಆಗಿಲ್ಲ. ಹೊರಗಿನವರ ದಾಳಿಯ ಭಯವಿಲ್ಲದೇ ಇರಬಹುದು, ಆದರೆ ನಮ್ಮ ಸಮಾಜದ ಪ್ರವೃತ್ತಿ ಮಾತ್ರ ಹಿಂಸೆಯದೇ.

ಬರಲಿರುವ ಸಹಸ್ರಮಾನ ನಮ್ಮ ಮಹಿಳೆಯರಿಗೆ ಹೇಗಿದ್ದೀತು? ಅದು ವಿದ್ಯಾವಂತರೆಂದು ಹೇಳಿಕೊಳ್ಳುವ ನಮ್ಮ ಆಯ್ಕೆಗಳನ್ನೇ ಅವಲಂಬಿಸಿರುತ್ತದೆ. ಸ್ವಹಿತ, ಸಂಕುಚಿತ ಮನೋಭಾವಕ್ಕೇ ಒತ್ತು ಕೊಟ್ಟರೆ, ವಿನಾಶದತ್ತ ಜಾರಿ ಹೋಗಲಿದ್ದೇವೆ, ಅಷ್ಟೆ.

ಎಲ್ಲಾ ಮಹಿಳೆಯರೂ ಸುರಕ್ಷಿತವಾಗಿರದ ಹೊರತು ಯಾವ ಮಹಿಳೆಗೂ ರಕ್ಷಣೆಯಿಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಸುತ್ತಲೂ ಬಡತನ, ಹಿಂಸೆ ಮತ್ತು ಕಚ್ಚಾಟಗಳು ಇರುವಾಗ, ಅವುಗಳ ಮಧ್ಯೆ ನಾವು ಒಂದಿಷ್ಟು ಸಂಪತ್ತು-ಸಮೃದ್ಧಿ ಹಾಗೂ ಸಂರಕ್ಷಣೆಯೊಂದಿಗೆ ದ್ವೀಪಗಳಂತೆ ಇರಲಾರೆವು. ಹೊರಗಿನ ಘರ್ಷಣೆ-ತಿಕ್ಕಾಟಗಳ ಅಲೆಗಳು ನಮ್ಮನ್ನು ಅಪ್ಪಳಿಸಿಯೇ ತೀರುತ್ತವೆ.

ಸ್ವಾತಂತ್ರ್ಯದ ನಂತರವೂ ಕೂಡ ದಶಕಗಳಿಂದ ನಮ್ಮ ದೇಶದ ವಿದ್ಯಾವಂತ ಶಿಷ್ಟ ಸಮಾಜದ ಮಹಿಳೆಯರು ತಮ್ಮದೇ ಆದ ಪ್ರಪಂಚದಲ್ಲೇ ಉಳಿದುಕೊಂಡು ಬಂದಿದ್ದಾರೆ. ನಮ್ಮ ದೇಶದ ಬಹುತೇಕ ಮಹಿಳೆಯರಿಗೆ ಇರುವ ಕಷ್ಟಕಾರ್ಪಣ್ಯಗಳ ಪರಿವೆಯೇ ಅವರಿಗಿಲ್ಲ. ಉದಾಹರಣೆಗೆ, ಬಹಳಷ್ಟು ಮಹಿಳೆಯರಿಗೆ ಕುಡಿಯಲು ಯೋಗ್ಯವಾದ ಸ್ವಚ್ಛವಾದ ನೀರು ಕೂಡ ಸಿಗುವುದು ಕಷ್ಟ. ಆದರೆ ಇದರ ಬಗ್ಗೆ ಕೇವಲ ಕೆಲವರಿಗೆ ಮಾತ್ರ ಗೊತ್ತಿದೆ ಕೆಲವರಿಗೆ ಮಾತ್ರ ಕಾಳಜಿ ಇದೆ. ನೀರಿಗಾಗಿ ಅವರು ಪಡಬಾರದ ಪಾಡು ಪಡುವುದರಿಂದ ದೈಹಿಕ ಶ್ರಮವೂ ಆಗುವುದಲ್ಲದೆ, ಕುಟುಂಬದವರ ಆರೋಗ್ಯವೂ ಕೆಡುತ್ತದೆ.

ಕಾಲಕಾಲಕ್ಕೆ ಸ್ವಚ್ಛ ನೀರಿನ ಪೂರೈಕೆ ಕೇವಲ ನಗರ ಪ್ರದೇಶದರ ಹಕ್ಕು ಎಂದು ನಾವು ಭಾವಿಸಿದಂತಿದೆ. ದುಡ್ಡಿರುವವರು ತಮ್ಮದೇ ಆದ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ಬೋರ್‌ವೆಲ್‌ಗಳನ್ನು ತೋಡಿಸುತ್ತಾರೆ; ಜಲ ಶುದ್ಧೀಕರಣ ಸಾಧನಗಳನ್ನು ಅಳವಡಿಕೊಳ್ಳುತ್ತಾರೆ. ಆದರೆ ನಾವೀಗ ಎಂಥಾ ಪರಿಸ್ಥಿತಿಯಲ್ಲಿ ಇದ್ದೇವೆಂದರೆ, ನಗರ ಪ್ರದೇಶದ ಶ್ರೀಮಂತ ಸಮುದಾಯವನ್ನೂ ನೀರಿನ ಅಭಾವ ತೀವ್ರವಾಗಿ ಕಾಡತೊಡಗಿದೆ.

ಸರಿ ಮತ್ತೆ ಇಲ್ಲಿಂದ ಅಪರಾಧ, ಕ್ರೌರ್ಯತನ, ಹಿಂಸೆಗಳ ವಿಷ ವರ್ತುಲ ಪ್ರಾರಂಭವಾಗುತ್ತದೆ. ಪುರುಷರ ಮೇಲೆ ಮಹಿಳೆಯರ, ಬಡವರೇ ಆಗಿರಲಿ-ಶ್ರೀಮಂತರೇ ಆಗಿರಲಿ ಅವಲಂಬನೆ ಹೆಚ್ಚುತ್ತದೆ. ಜೀವನ ದುರ್ಭರವಾಗುತ್ತದೆ. ಎಂಥ ಯಶಸ್ವೀ ವೃತ್ತಿಪರ ಮಹಿಳೆಯೂ ಒಂಟಿಯಾಗಿ ಪ್ರಯಾಣ ಮಾಡಲು ಹಿಂದೆ ಮುಂದೆ ನೋಡಬೇಕಾಗಿದೆಯೆಂದರೆ, ಇದೊಂದು ಆತಂಕದ ಸನ್ನಿವೇಶವೇ.

ಅತ್ತ ನಗರ ಪ್ರದೇಶಗಳಲ್ಲಿ ಏರುತ್ತಿರುವ ಅಪರಾಧ ಸಂಖ್ಯೆಗಳು - ಇತ್ತ ಈ ಬಗ್ಗೆ ನಿಷ್ಕ್ರಿಯರಾಗಿರುವ ಪೋಲಿಸರು, ಶ್ರೀಮಂತ ವರ್ಗ ಮತ್ತೆ ತನ್ನದೇ ಆದ ಪರಿಹಾರ ಮಾರ್ಗಗಳನ್ನು ರೂಪಿಸಿಕೊಳ್ಳುತ್ತದೆ. ಖಾಸಗಿ ಭದ್ರತಾ ಪಡೆಗಳನ್ನು ನೇಮಕ

ಮಾಡಿಕೊಳ್ಳುತ್ತದೆ. ಪ್ರತಿಯೊಬ್ಬರೂ ಹಿರಿಯ ಪೋಲಿಸ್ ಅಧಿಕಾರಿಗಳ, ಶಕ್ತಿಶಾಲಿ ರಾಜಕೀಯ ವ್ಯಕ್ತಿಗಳ 'ಮೈತ್ರಿ' ಬೆಳೆಸಿಕೊಂಡು ಕಷ್ಟಕಾಲದಲ್ಲಿ ಅವರನ್ನೆ 'ನನ್ನಪ್ಪಾ, ದೊರೆಯೇ' ಎಂದು ಮೊರೆ ಇಡುತ್ತಾರೆ.

ಹಿಂದೆ ಬಡ ಹಾಗೂ ಅವಿದ್ಯಾವಂತ ವರ್ಗಕ್ಕೆ ಸಣ್ಣ ಪುಟ್ಟ ಕಳ್ಳರಿಗಿಂತ ಪೋಲಿಸರನ್ನು ಕಂಡರೆ ಭಯವಿತ್ತು. ಅವರು ನೀಡುವ ಹಿಂಸೆಯೇನು ಕಡಿಮೆಯೇ!? ಈಗ ಪೋಲಿಸರ ಕೈಗಳಲ್ಲಿ ಯಾರೂ ಸುರಕ್ಷಿತರಲ್ಲ - ಬಡವರೇ ಇರಲಿ, ಶ್ರೀಮಂತರೇ ಆಗಿರಲಿ - ರಾಜನ್ ಪಿಳ್ಳೆ ಪ್ರಕರಣ ನೆನಪಿದೆಯಲ್ಲವೇ?

ಇಡೀ ಸಮಾಜದ ಹಿತವನ್ನು ಕಡೆಗಣಿಸಿ, ಸ್ವಹಿತವನ್ನು ಮಾತ್ರ ನೋಡಿಕೊಂಡರೆ ಆಗುವ ಪರಿಣಾಮವೇನು, ಜನ ಎಷ್ಟು ಅಸಹಾಯಕರಾಗುತ್ತಾರೆ ಎಂಬುದನ್ನು ದಿನೇ ದಿನೇ ಇಳಿಮುಖವಾಗುತ್ತಿರುವ ನಮ್ಮ ಜೀವನದ ಗುಣಮಟ್ಟ ಸೂಚಿಸುತ್ತದೆ.

ಈ ಹೊತ್ತಿನ ನೀತಿಯೇನೆಂದರೆ, ಶಿಷ್ಟ ಶ್ರೀಮಂತ ವರ್ಗದ ಮಹಿಳೆಯರು ತಮ್ಮ ತಮ್ಮ ಮೂಗಿನ ನೇರಕ್ಕೆ ಯೋಚಿಸುವುದನ್ನು ಬಿಟ್ಟು, ಇಡೀ ಸಮಾಜದ ಮಹಿಳೆಯರ ಪರವಾಗಿ ಯೋಚಿಸಬೇಕು, ಕೆಲಸ ಮಾಡಬೇಕು. ಅವರ ಭದ್ರತೆ ಹಾಗೂ ಆರೋಗ್ಯ ಬೇರೆಯಲ್ಲ, ಇವರದು ಬೇರೆಯಲ್ಲ, ಎಲ್ಲಿಯವರೆಗೂ ಎಲ್ಲ ಮಹಿಳೆಯರು ಈ ಧೋರಣೆ ತಳೆಯುವವರೆಗೂ, ಯಾವೊಬ್ಬ ಮಹಿಳೆಯೂ ಸುರಕ್ಷಿತಳಲ್ಲ. ನಾವೇ ನಮ್ಮ ಚೌಕಟ್ಟುಗಳನ್ನು ಸೀಮಿತಗೊಳಿಸಿಕೊಂಡು ಬಿಟ್ಟರೆ, ಬರಲಿರುವ ಶತಮಾನಗಳಲ್ಲಿ ಕೇವಲ ಬೆರಳೆಣಿಕೆಯಷ್ಟು ಮಹಿಳೆಯರು ಮಾತ್ರ 'ರಾಣಿಜೇನು'ಗಳಂತಾಗಬಲ್ಲರು. ತಮ್ಮ ಸಾಮರ್ಥ್ಯದಿಂದ ಪುರುಷರನ್ನು ಅವರದೇ ಕ್ಷೇತ್ರದಲ್ಲಿ ಅವರ 'ರೀತಿನೀತಿಗಳಲ್ಲೇ' ಹಿಂದೂಡಬಲ್ಲರು. ಆದರೆ ಪುರುಷರ ಹಿಡಿತದಲ್ಲೇ ಉಳಿದು ಬಿಟ್ಟಿರುವ ರಾಜಕೀಯ, ಆರ್ಥಿಕ ಹಾಗೂ ಸಾರ್ವಜನಿಕ ವಲಯಗಳನ್ನು ಪ್ರವೇಶಿಸುವ ಪ್ರಕ್ರಿಯೆಯಲ್ಲಿ ಮಹಿಳೆಯರೂ ತಮ್ಮತನವನ್ನು ಮರೆತು ತಮ್ಮ ಯೋಚನಾ ಹಾಗೂ ಕಾರ್ಯವೈಖರಿಗಳಲ್ಲಿ ಪುರುಷ ಸ್ವಭಾವಗಳನ್ನೇ ಮೈಗೂಡಿಸಿಕೊಳ್ಳುತ್ತಾರೆ.

ಮ್ಯಾಡಲನ್ ಆಲ್‌ಬೈಟ್‌ಳ ವ್ಯಕ್ತಿತ್ವವನ್ನೇ ತೆಗೆದುಕೊಳ್ಳಿ ಅಮೇರಿಕದ ರಾಜಕೀಯ ಕ್ಷೇತ್ರದಲ್ಲಿ ಉನ್ನತ ಹುದ್ದೆಯಲ್ಲಿರುವ ಪ್ರಭಾವೀ ಮಹಿಳೆಯರು ಅವರು ದೇಶಗಳೊಂದಿಗೆ ಮುಖ್ಯವಾಗಿ ಭಾರತ ಮುಂತಾದ ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ವ್ಯವಹರಿಸುವಾಗ ಸ್ತ್ರೀಯರಿಗಿರುವ ಸಕಾರಾತ್ಮಕ ಗುಣಾಂಶಗಳೇನಾದರೂ ಅವರಲ್ಲಿ ಕಂಡುಬರುತ್ತದೆಯೇ? ಇನ್ನೊಬ್ಬರನ್ನು ಅರ್ಥ ಮಾಡಿಕೊಳ್ಳುವ ಗುಣವಿದೆಯೇ? ತಾಳ್ಮೆ, ಅನುಕಂಪಗಳಿವೆಯೇ? ಭಾರತೀಯ ದೃಷ್ಟಿಯಿಂದ ನೋಡಿದಾಗ, ಅಮೇರಿಕದ ಯಾವುದೇ ಪುರುಷ ರಾಜಕಾರಣಿಗಿರುವಂತೆಯೇ ಆಕೆಯಲ್ಲೂ ಅಧಿಕಾರದ ಮದ ನೆತ್ತಿಗೇರಿರುವುದು ಗೋಚರವಾಗುತ್ತದೆ. ಇದೇ ರೀತಿಯ ಮಹಿಳೆಯರು ರಾಜಕೀಯ ಗದ್ದುಗೆಗಳನ್ನು ಏರಿಬಿಟ್ಟರೆ, 'ಮಹಿಳೆಯರು ರಾಜಕೀಯ ಸೂತ್ರ ಹಿಡಿದರೆ ಎಷ್ಟು ಚೆನ್ನ,ಎಂದು ಹೇಳಲಾದೀತೇ?

ಅಮೇರಿಕದ ವಿಷಯವೇಕೆ? ಇಲ್ಲಿನ ಸನ್ನಿವೇಶಕ್ಕೇ ಬರೋಣ ಇಲ್ಲಿಯೂ ತದ್ರೂಪಿಗಳಿದ್ದಾರೆ. ರಾಜಕೀಯ ಮೆಟ್ಟಿಗಳನ್ನೇರಿ ನಿಂತಿರುವ ಮಹಿಳೆಯರೆಲ್ಲ ಭ್ರಷ್ಟಾಚಾರ, ಕ್ರೌರ್ಯ, ಅಕ್ರಮಗಳಲ್ಲಿ ತಮ್ಮ ಪುರುಷ ಸಹೋದ್ಯೋಗಿಗಳನ್ನು ಮೀರಿಸಿದ್ದಾರೆ. ಜಯಲಲಿತ, ಮಾಯಾವತಿ-ಅಷ್ಟೇ ಏಕೆ-ಇಂದಿರಾಗಾಂಧಿ ಸಹ ಮಹಿಳೆಯರೂ ಒಂದು ಗುಂಪು, ಸಶಕ್ತ ಗುಂಪು ಎಂದು ಪರಿಗಣಿಸಿಲ್ಲ. ಬದಲಿಗೆ ಸಾಮಾನ್ಯ ಹೆಂಗಸರಲ್ಲಿ ಅಸಹಾಯಕತೆಯ ಭಾವನೆಯನ್ನೇ ಅವರು ತುಂಬುತ್ತಾರೆ. ಮಹಿಳೆ ಸಾರ್ವಜನಿಕ ವಲಯದಲ್ಲಿ ಯಶಸ್ಸು ಪಡೆಯಬೇಕಾದರೆ 'ಪುರುಷರ ದಾಳೀಕೋರ ಪ್ರವೃತ್ತಿ'ಯನ್ನೇ ಮೈಗೂಡಿಸಿಕೊಳ್ಳಬೇಕು, ಪುರುಷರಿಗಿಂತ ಭ್ರಷ್ಟ ಧೋರಣೆ ಇರಬೇಕು ಎಂಬುದೇ ಅವರ ಸೂಚಿತಾರ್ಥ.

ಇಡೀ ಮಹಿಳಾ ಸಮುದಾಯದ ಹಿತದಲ್ಲೇ ತಮ್ಮ ಹಿತವೂ ಇದೇ ಎಂಬುದನ್ನು ಎಲ್ಲಾ ಮಹಿಳೆಯರೂ ಗುರುತಿಸಬೇಕು. ಇಡೀ ವಿಶ್ವದಲ್ಲೇ ಜಾತಿ ಜನಾಂಗೀಯ ಕಲಹ, ಹಿಂಸೆ ದೌರ್ಜನ್ಯ, ತಾರತಮ್ಯಗಳನ್ನು ತೊಡೆದು ಹಾಕಲು ಶ್ರಮಿಸಬೇಕು. ಆಗ ಮಾತ್ರವೇ ಮುಂದಿನ ಸಹಸ್ರಮಾನದಲ್ಲಿ ಮಹಿಳೆಯರದೇ ಮೇಲುಗೈ ಆಗುತ್ತದೆ.

ಹಸಿವು, ಬಡತನ, ಅಪೌಷ್ಟಿಕತೆಗಳ ನಿರ್ಮೂಲನೆಗೆ ಪಣತೊಡಬೇಕು-ಮಾರ್ಗಗಳನ್ನು ರೂಪಿಸಬೇಕು. ಹುಟ್ಟುವ ಪ್ರತಿಯೊಂದು ಮಗುವಿಗೂ ಅದರ ಹಕ್ಕುಗಳಿಂದ ವಂಚನೆಯಾಗಬಾರದು. ಅದರ ಹೊಟ್ಟೆ ಬಟ್ಟೆಗೆ, ಸೂರಿಗೆ, ಶಿಕ್ಷಣಕ್ಕೆ ಸರಿಯಾದ ವ್ಯವಸ್ಥೆ ಆಗಬೇಕು. ಪುರುಷರನ್ನು ಸೋಲಿಸಲು ಅವರದೇ ವಿಧಾನಗಳನ್ನು ಅನುಕರಿಸುವ ಬದಲು, ಒಮ್ಮತದ ರಾಜಕೀಯ ಮಾರ್ಗವನ್ನು ಆಯ್ದುಕೊಳ್ಳುವಂತೆ ಪುರುಷರಿಗೆ ತೋರಿಸಿಕೊಡುವಲ್ಲಿ ಮಹಿಳೆಯರು ಸಕ್ರಿಯ ಪಾತ್ರವಹಿಸಬೇಕು. ಬಡಿದಾಡುವುದರಿಂದ ಪ್ರಯೋಜನವಿಲ್ಲ.

ಎರಡನೆಯ ಸಹಸ್ರಮಾನದಲ್ಲಿ ಭಾರತೀಯ ಮಹಿಳೆಯರು ಕೆಳಸ್ತರದಲ್ಲಿದ್ದು, ಹಿಂಸೆ ದೌರ್ಜನ್ಯ ಅಭಾವಗಳ ನೋವನ್ನು ಅನುಭವಿಸಿದ್ದಾರೆ-ಸಹಿಸಿದ್ದಾರೆ. ಈಗ ಈ ಸಹಸ್ರಮಾನದ ಅಂತ್ಯದಲ್ಲಿ ಈ ಅನ್ಯಾಯ ಅಕ್ರಮಗಳ ವಿರುದ್ಧದ ಯುದ್ಧದಲ್ಲಿ ಭಾರತೀಯ ಮಹಿಳೆಯೇ ವಿಶ್ವದ ಮಹಿಳೆಯರಿಗೆ ದಾರಿ ತೋರಿಸುತ್ತಾರೆ; ಆರಂಭವಾಗಲಿರುವ ಸಹಸ್ರಮಾನ ನಿಜವಾದ ಅರ್ಥದಲ್ಲಿ ಯುಗಾರಂಭವಾಗಲಿ, ಎಂದೇ ನಾನು ಹಾರೈಸುತ್ತೇನೆ.

ಕನ್ನಡಕ್ಕೆ: ಗೀತಾ

ಕೀರಿಟ ಗೆದ್ದು ಬಂದ ಭಾರತದ 'ಪರ್ಫೆಕ್ಟ್' ಸುಂದರಿಯರು

ನೇಮಿ

ಭಾರತ ಇದೀಗ ಐದನೇ ಬಾರಿ 'ಸೌಂದರ್ಯ'ದ ಕಿರೀಟ ತೊಟ್ಟಿದೆ. ಯುಕ್ತಾ ಮುಖೀ ಅವರನ್ನು 1999ರ 'ಭುವನ ಸುಂದರಿ' ಎಂದು ಘೋಷಿಸಲಾಗಿದೆ. ಕಳೆದ ಐದು ವರ್ಷಗಳಲ್ಲಿ ಭಾರತಕ್ಕೆ ನಾಲ್ಕು ಬಾರಿ ಸೌಂದರ್ಯ ಕಿರೀಟ! ಇದೇನು ಇದ್ದಕ್ಕಿದ್ದಂತೆ ಭಾರತದಲ್ಲಿ ಸುಂದರಿಯರು ಹೆಚ್ಚಿದರೆ? ಇಲ್ಲ, ಇದಕ್ಕೆ ಮೊದಲು ಇಷ್ಟೆಲ್ಲ ವರ್ಷಗಳು ಸುಂದರಿಯರಿರಲಿಲ್ಲವೆ ಎಂದು ಕೇಳಬೇಡಿ. ಮೊದಲೆಲ್ಲ ನಮ್ಮ ಭಾರತೀಯ ಸೌಂದರ್ಯ ಪರಿಕಲ್ಪನೆಯಂತೆ ಹುಡುಗಿ ಬೇಲೂರಿನ ಶಿಲಾಬಾಲಕಿಯಂತೆ ಮೈದುಂಬಿ ಕೊಂಡಿರುತ್ತಿದ್ದಳು. ಇದೀಗ ಸರಾಸರಿ ಭಾರತೀಯ ಗಂಡಸರನ್ನು ಮೀರಿಸಿದ ಎತ್ತರದ, ನಿಳುವಾದ ಕಾಲುಗಳ, ಒಣಗಿಕೊಂಡ ಬಾರ್ಬಿ ಬೊಂಬೆಯಂತೆ ಅಂತರ್ರಾಷ್ಟ್ರೀಯ ಮಾನದಂಡಕ್ಕೆ ಹೊಂದುವಂತೆ ಹುಡುಗಿಯರನ್ನು ತಿದ್ದಿ ತಯಾರಿಸಲು ಭಾರತದಲ್ಲಿ ಹೇರಳವಾದ 'ತಜ್ಞತೆ' ಇದೆ. ಸ್ಪರ್ಧೆಯ ಅಗತ್ಯಕ್ಕೆ ತಕ್ಕಂತೆ ದೇಹವನ್ನು ರಿಪೇರಿ ಮಾಡಿಸಿಕೊಳ್ಳಲು ಸಿದ್ಧವಾದ ಹುಡುಗಿಯರಿದ್ದಾರೆ, ಪ್ರೋತ್ಸಾಹಿಸುವ ತಾಯ್ತಂದೆಯರಿದ್ದಾರೆ. ಕಾರಣ ಕೀರಿಟದ ಜೊತೆಯಲ್ಲಿ 43 ಲಕ್ಷ ರೂಪಾಯಿಯ ಬಹುಮಾನವಿದೆ. ಒಂದು ಕಾಲಕ್ಕೆ ಹೆಣ್ಣು ಮಕ್ಕಳು ಕಾಲು ಕಾಣುವ ಉಡುಪು ತೊಟ್ಟರೆ ಸಿಡುಕುತ್ತಿದ್ದ ತಾಯ್ತಂದೆಯರು, ಈಜು ಕೊಳದ ಬಳಿ ಕೂಡಾ ಈಜು ತೊಡುವುದನ್ನು ತಡೆಯುತ್ತಿದ್ದ ತಂದೆ ತಾಯಿಗಳು ಇಂದು 'ಇಟ್ಸಿ ಬಿಟ್ಸಿ ಬಿಕನಿ'ಯಲ್ಲಿ ತಮ್ಮ ದೇಹದಳತೆಯನ್ನು ಪ್ರದರ್ಶಿಸುವ ಸೌಂದರ್ಯ ಸ್ಪರ್ಧೆಗಳಿಗೆ ಧಾರಾಳವಾಗಿ ಪ್ರೋತ್ಸಾಹಿಸುತ್ತಾರೆ.

ಇಂದು ಹೊರಬೀಳುವ ಒಬ್ಬೊಬ್ಬ ಸೌಂದರ್ಯ ರಾಣಿಯ ಹಿಂದೆಯೂ, ಈ 'ಪರ್ಫೆಕ್ಟ್' ಸುಂದರಿಯರನ್ನು ತಯಾರಿಸಿದ ತಜ್ಞರ ಹಿಂಡಿದೆ. ಬ್ಯೂಟಿಷಿಯನ್, ಸ್ಪೀಚ್ ಥೆರಪಿಸ್ಟ್, ಹೇರ್ ಸ್ಟೈಲಿಸ್ಟ್, ಉಡುಪು ವಿನ್ಯಾಸಕರು, ಕಾಸ್ಮೆಟಿಕ್ ದಂತ ವೈದ್ಯರು, ಕಾಸ್ಮೆಟಿಕ್ ಶಸ್ತ್ರವೈದ್ಯರು, ನೃತ್ಯದ ಗುರುಗಳು, ಎಟಿಕೆಟ್ ಗುರುಗಳು... ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇವೆಲ್ಲವೂ ಸಾಕಷ್ಟು ವೆಚ್ಚದ ಚಿಕಿತ್ಸೆಗಳು, ತರಪೇತುಗಳು. ಆದರೆ 43 ಲಕ್ಷದ ಎದುರ ಸಣ್ಣದಾಗಿ ಕಾಣುವ ಬಂಡವಾಳವಿದು.

ಕಿರೀಟ ತೊಟ್ಟ ಯುಕ್ತಾರನ್ನು 'ನಿಮಗೆ ಹೇಗೆನಿಸುತ್ತದೆ?' ಎಂದಾಗ, ಐ ಯಾಮ್ ಪರ್‌ಫೆಕ್ಟ್' ಎಂದುತ್ತರಿಸಿದರು! ದಿಟವಾದ ಮಾತು, ಕಾರಣ ಇಂದು ಸೌಂದರ್ಯ ರಾಣಿಯರು ಕಾರ್ಖಾನೆಯ ಅಸೆಂಬ್ಲಿ ಲೈನ್‌ನಿಂದ ಅಂತರಾಷ್ಟ್ರೀಯ ಮಾನದಂಡಕ್ಕನುಸಾರವಾಗಿ, ಯಂತ್ರದಲ್ಲಿ ಸಿದ್ಧ ಮಾಡಿ ತಯಾರಿಸಿ 'ಪರ್ಫೆಕ್ಟ್ ರಾಣಿ'ಯರು. ಇಂದಿನ 'ಸೌಂದರ್ಯ', ದೇವರು ಕೊಟ್ಟದ್ದಲ್ಲ, ಈ ಭೂಮಿಯ ಮೇಲೇ ತಯಾರಾದದ್ದು. 'ಹುಡುಗಿ ಎತ್ತರವಾಗಿರಬೇಕು ಅಷ್ಟೆ, ಉಳಿದದ್ದು ನಾವು ಮಾಡುತ್ತೇವೆ' ಎಂದು ಆತ್ಮವಿಶ್ವಾದಿಂದ ಸಾರುತ್ತಾರೆ 'ಫಿಟ್‌ನೆಸ್ ತಜ್ಞೆ' ರಮಾಬ್ಯಾನ್ಸ್. ಇಂದು ನಮ್ಮಿಂದ ಮಾಡಲಾರದ್ದು ಹುಡುಗಿಯ ಎತ್ತರವನ್ನು ಹಿಗ್ಗಿಸುವುದೊಂದೆ. ಉಳಿದದ್ದಕ್ಕೆಲ್ಲ, ಬರೀ ನೇಮ, ನಿಯಮ, ವ್ಯಾಯಾಮ ಅಲ್ಲ ಶಸ್ತ್ರ ಚಿಕಿತ್ಸೆಯೇ ಇದೆ. ನಿನಗೆ ಹೊಸ ಮೂಗು, ತುಟಿ, ಗಲ್ಲ, ಮುಖ ನೀಡುವುದಷ್ಟೇ ಅಲ್ಲ, 'ಲೈಪೋಸಕ್ಷನ್' ಮೂಲಕ ಹೊಸ ದೇಹಾಕರವನ್ನು ನೀಡಬಲ್ಲೆವು' ಎನ್ನುತ್ತಾರೆ. ಇದು ಬರೀ ಬಡಾಯಿಯಲ್ಲ, ಇಂದು ಹುಡುಗಿಯರು ಕಿರೀಟ ತೊಡಲು ಶಸ್ತ್ರ ಚಿಕಿತ್ಸೆಯ ಹಂತಕ್ಕೂ ಹೋಗಲು ಸಿದ್ಧವಿದ್ದಾರೆ. ಕಾಸ್ಮೆಟಿಕ್ ದಂತವೈದ್ಯರಾದ ಡಾ। ಸುನಿಲ್ ಭೂಲಾಬಾಯಿ, 'ಇಂದಿನ ಈ ಸುಂದರಿಯರನ್ನು ನೋಡಿದರೆ ವೀನಸ್ ಕೂಡ ನಾಚುತ್ತಿದ್ದಳು. ಕಾರಣ ಯಂತ್ರದಿಂದ ತಯಾರಿಸಿದಂತೆ ಇವರು ಪರ್ಫೆಕ್ಟ್ ಇದ್ದಾರೆ' ಎನ್ನುತ್ತಾರೆ.

ಈ 'ಪರ್ಫೆಕ್ಟ್ ಸುಂದರಿ'ಯನ್ನು ಹೇಗೆ ತಯಾರಿಸುತ್ತಾರೆ ಗೊತ್ತೆ? ಮುಖದಿಂದ ಆರಂಭಿಸೋಣ. ನಕ್ಕಾಗ ಒಸಡುಗಳು ಕಾಣುತ್ತವೆಯೆ, ಉಹುಂ ಅದು ಸೌಂದರ್ಯವಲ್ಲ, ಸರಿ ಕಾಸ್ಮಟಿಕ್ ದಂತವೈದ್ಯರು ನಿಮ್ಮ ಒಸಡುಗಳನ್ನು ಮೇಲಕ್ಕೆ ಸರಿಸುವರು, ಹಲ್ಲುಗಳು ಸಾಲಾಗಿ ಸಮರೇಖೆಯಲ್ಲಿ ಇಲ್ಲ ಎಂದರೆ ನೇರ ಮಾಡಿ ಜೋಡಿಸುವರು, ಒರಟು ತುದಿಗಳನ್ನು ಗರಗಸದಿಂದ ತುಂಡರಿಸಿ ಸಮನಾಗಿಸುವರು. ಹಲ್ಲುಗಳು ಬಣ್ಣಗೆಟ್ಟಿವೆಯೆ, ಚಿಂತೆ ಇಲ್ಲ, ಅಪ್ಪಟ ಬಿಳಿಯ ಬಣ್ಣಕ್ಕೆ ತರುವರು. ನಿಮ್ಮ ದವಡೆಮೂಳೆಯ ಆಕಾರ ಸರಿ ಇಲ್ಲ ಎನಿಸಿದರೆ ಶಸ್ತ್ರ ಚಿಕಿತ್ಸೆಯಿಂದ ಗುಂಡು ಅಥವಾ, ಚೌಕದ ಆಕಾರ ನೀಡಬಲ್ಲರು. ಮಾಜಿ ಮಿಸ್ ಇಂಡಿಯಾ ಮನ್‌ಪ್ರೀತ್ ಬ್ರಾರ್ ತನ್ನ ದವಡೆಮೂಳೆಯನ್ನು (jaw) ಗುಂಡಾದ ಆಕಾರ ಬರುವಂತೆ ಕಾಸ್ಮೆಟಿಕ್ ಆರ್ತೋಡಾಂಟಿಸ್ಟ್ ಮಯೇಕರ್ ಅವರಿಂದ

ಕೆತ್ತಿಸಿಕೊಂಡಿದ್ದರು. ಡಾ. ಸುನಿಲ್ ಅವರು ಮಾಜಿ ಮಿಸ್ ಇಂಡಿಯಾ ನಮ್ರತಾ ಶಿರೋಡ್ಕರ್ ಒಸಡುಗಳನ್ನು ಕತ್ತರಿಸಿ ತಿದ್ದಿದಂತೆ, ಐಶ್ವರ್ಯ ರಾಯ್ ಹಲ್ಲುಗಳ ಆಕಾರವನ್ನು ತಿದ್ದಿ ಬೆಳಗಿಸಿದರು. ಮಾಜಿ 'ಭುವನದ ಸುಂದರಿ' ಡಯಾನ ಮತ್ತು ಹಾಜಿ 'ಭುವನ ಸುಂದರಿ' ಯುಕ್ತಾ ಅವರ ಹಲ್ಲುಗಳ ಒರಟು ತುದಿಗಳನ್ನು ಚಿಪ್ ಮಾಡಿ ಸರಿಪಡಿಸಿದರು.

ಇನ್ನು ಮುಖವನ್ನು ತಿದ್ದಿ ತೀಡಲು ಕಾಸ್ಮೆಟಿಕ್ ಸರ್ಜನ್‌ರಿದ್ದಾರೆ. ಮೂಗನ್ನು ಚೂಪಾಗಿ, ನೇರವಾಗಿ ಕಡೆದು ತಿದ್ದಿ ಸರಿಪಡಿಸುತ್ತಾರೆ. ಗಲ್ಲದ ಆಕಾರ ಸರಿ ಇಲ್ಲವೆ ಚಿಂತೆ ಇಲ್ಲ, ಅದನ್ನೂ ಕೆತ್ತೆ ಸರಿ ಪಡಿಸಬಹುದು. ಇನ್ನು ಸಿಲಿಕಾನ್ ಇಂಜೆಕ್ಷನ್ ತುಟಿಗಳಿಗೂ ಸಾಧ್ಯವಾಗಿದೆ. ತುಟಿಗಳು ತೆಳುವಾಗಿವೆ, ತುಟಿಯುಬ್ಬಿದ 'ಸೆಕ್ಸಿಪೌಟ್', ಬೇಕು ಎಂದರೆ, ತುಟಿಗಳಿಗೆ ಸಿಲಿಕಾನ್ ಇಂಜೆಕ್ಷನ್ ನೀಡಬಲ್ಲರು. ಸೊಂಟದಲ್ಲಿ, ತೊಡೆಗಳಲ್ಲಿ ಬೊಜ್ಜಿದೆಯೇ ಅದಕ್ಕೂ ಶಸ್ತ್ರಚಿಕಿತ್ಸೆ ಇದೆ. 'ಲೈಪೋಸಕ್ಷನ್' ಮೂಲಕ ನಿಮ್ಮ ಸೊಂಟ ಮತ್ತು ತೊಡೆಯ ಬೊಜ್ಜು ತೆಗೆಯುತ್ತಾರೆ.

ಇಷ್ಟಲ್ಲದೆ ಈ ಹುಡುಗಿಯರಿಗೆ ತಿನ್ನುವುದು, ಕೂರುವುದು, ನಿಲ್ಲುವುದು, ನಡೆಯುವುದು ಕಡೆಗೆ ಸೀನುವುದೂ ಹೇಗೆಂದು ಹೇಳಿಕೊಡುತ್ತಾರೆ. ಆಡುವ ಮಾತು, ನಗುವ ರೀತಿ ಎಲ್ಲದಕ್ಕೂ ತರಪೇತು ನೀಡುವವರಿದ್ದಾರೆ. ಅವರ ಹಾವಭಾವ, ನಡಿಗೆಯ ಭಂಗಿ, ನುಡಿಯುವ ಬಗ್ಗೆ, ಉದುರಿಸುವ ನುಡಿ ಮುತ್ತುಗಳೆಲ್ಲ 'ಪರ್ಫೆಕ್ಟ್' ಇರಬೇಕಲ್ಲ. ಈ ಬಾರಿಯ 'ಭುವನ ಸುಂದರಿ' ಯುಕ್ತಾ, ಇಡೀ ಶೋ ಉದ್ದಕ್ಕೂ ತಮ್ಮ ತೆಳುವಾದ ಬಣ್ಣ ಬಳಿದ ಚೂಪು ಉಗುರಿನ ಒಂದು ಕೈಯನ್ನು ಸದಾ ಎದೆಯ ಮೇಲೆ ಇಟ್ಟುಕೊಂಡಿದ್ದರಂತೆ. ಕಾರಣ ಹೀಗೆ ಮಾಡುವಂತೆ ಅವರ 'ವೈಯಕ್ತಿಕ ತರಪೇತುಗಾರ್ತಿ ಮಿಕಿ ಮೆಹ್ತಾ ಸಲಹೆ ನೀಡಿದ್ದರು.!

ಅಂತರರಾಷ್ಟ್ರೀಯ ಮಾನದಂಡಕ್ಕೆ ಸರಿಯಾಗಿ ನಿಮ್ಮ ದೇಹವನ್ನು ಕಡೆದು ಸಿದ್ಧಪಡಿಸಿಕೊಂಡ ಮೇಲೆ ನೀವು, ಪಾಶ್ಚಾತ್ಯರ ಶಿಷ್ಟಾಚಾರಗಳನ್ನೆಲ್ಲ ಕಲಿತಿರಬೇಕು. ಇದಕ್ಕೆಂದೇ ಸಬಿರಾ ಮರ್ಚೆಂಟೆರಂಥಾ 'ಎಟಿಕೆಟ್ ಗುರು'ಗಳಿದ್ದಾರೆ. ಚಾಕು ಫೋರ್ಕ್ ಹಿಡಿಯುವುದಂತೂ ಎಲ್ಲರೂ ಕಲಿತಿರುತ್ತಾರೆ, ಆದರೆ 'ಫಿಷ್ ನೈಫ್' ಯಾವುದು 'ಚೀಸ್ ನೈಫ್' ಯಾವುದು ಎಂದೆಲ್ಲ ತಿಳಿಸಲು, ನೇರವಾಗಿ ನಡೆಯಲು ಸಣ್ಣದಾಗಿ ಸೀನಲು ಎಟಿಕೆಟ್ ಗುರುಗಳು ಹೇಳಿಕೊಡುತ್ತಾರೆ.

ತಮಾಷೆಯ ವಿಷಯವೆಂದರೆ ದೇಹವನ್ನು ಇಷ್ಟೆಲ್ಲ ಪಾಡು ಪಟ್ಟು ಮಾರ್ಪಡಿಸಿ, ಶಸ್ತ್ರ ಚಿಕಿತ್ಸೆಯನ್ನೂ ಮಾಡಿಕೊಂಡು ತಿದ್ದಿ ತೀಡಿ ರಿಪೇರಿ ಮಾಡಿದ್ದ ಈ ಹುಡುಗಿಯರನ್ನು 'ನಿಮ್ಮ ರೋಲ್ ಮಾಡಲ್' ಯಾರೆಂದು ಹೇಳಿ 'ಆಕೆಯ ಅಂತರಂಗದ ಸೌಂದರ್ಯ, ಸಹಾನುಭೂತಿ' ಎಂದು ಪರ್ಫೆಕ್ಟ್ ಉತ್ತರಗಳನ್ನು ಕೊಡುತ್ತಾರೆ. ಅಂದಹಾಗೆ ದೇಹವನ್ನು ಇಷ್ಟೆಲ್ಲ ತಿದ್ದಿ ತೀಡಿ ನೇರ ಮಾಡಿಯೂ ಇದು ಕೇವಲ 'ದೇಹ ಸೌಂದರ್ಯದ ಪ್ರದರ್ಶನ' ಎಂದರೆ ನಮ್ಮ ಸೌಂದರ್ಯೋಪಾಸಕರಿಗೆ, ಸೌಂದರ್ಯ ರಾಣಿಯರಿಗೆ ಕೋಪ ಬರುತ್ತದೆ. 'ತಾವು ತಮ್ಮ' ಪರ್ಫೆಕ್ಟ್ ದೇಹ'ದಿಂದ ಗೆದ್ದದ್ದಲ್ಲ ತಮ್ಮ ಅಂತರಂಗದ ಸೌಂದರ್ಯದಿಂದ, ತಮ್ಮ ಬುದ್ಧಿವಂತಿಕೆ ಚುರುಕುತನದಷ್ಟೇ ಅಲ್ಲ, ತಮ್ಮ ಆಧ್ಯಾತ್ಮಿಕ ಪ್ರಭಾವಳಿಯಿಂದ ನಾವು ವಿಶ್ವದ ಮನಸೂರೆ ಮಾಡಿದೆವು' ಎಂದು ಇವರು ನಂಬಲಿಚ್ಛಿಸುತ್ತಾರೆ. ಆದರೆ ಇಂದಿನ ಪ್ರೇಕ್ಷಕರನ್ನು ಅಷ್ಟು ಸಲೀಸಾಗಿ ಮೂಢರಾಗಿಸಲು ಸಾಧ್ಯವಿಲ್ಲ. ಸೌಂದರ್ಯ ಸ್ಪರ್ಧೆಗಳ ಹಿಂದಿನ ಹೇರಳ ಹಣ, ಈ ಸ್ಪರ್ಧೆಗಳ ಮಾರುಕಟ್ಟೆಯ ಸಾಧನವಾಗಿರುವುದು ಎಂಥಾ ದಡ್ಡರಿಗೂ ಅರ್ಥವಾಗುವಷ್ಟು ಸ್ಪಷ್ಟವಾಗಿದೆ. ಇವೆಲ್ಲವೂ ಸರಕು ಮಾರಾಟದ ಹೊಸ ತಂತ್ರಗಳು ಎಂದು ಸಾಮಾನ್ಯ ಪ್ರೇಕ್ಷಕನಿಗೂ ಅರ್ಥವಾಗಿದೆ. ಈ ಸ್ಪರ್ಧೆಗಳನ್ನು ಸ್ಪಾನ್ಸರ್ ಮಾಡುವ ಕಂಪನಿಗಳು ಕೋಟಿ ಕೋಟಿ ರೂಪಾಯಿ ಖರ್ಚು ಮಾಡುತ್ತವೆ. ಕಾರಣ ಅದಕ್ಕೆ ಬದಲಾಗಿ ಪುಕ್ಕಟ್ಟೆಯ ಯಥೇಚ್ಛ ಪ್ರಚಾರ ಅವರಿಗೆ ಸಿಗುತ್ತದೆ. ಸೌಂದರ್ಯ ರಾಣಿಯರು ಮುಂದಿನ ಒಂದು ವರ್ಷ ಈ ಕಂಪನಿಗಳ ಎಲ್ಲ ಮಾಲುಗಳನ್ನು ಪ್ರಚಾರ ಮಾಡಲು ನಿಯಮಬದ್ಧರಾಗಿರುತ್ತಾರೆ.

ಅಂದಹಾಗೆ ಎಂದಿನಂತೆ ಈ ವರ್ಷವೂ ಭುವನ ಸುಂದರಿ ಸ್ಪರ್ಧೆ ನಡೆಯಿತು. ಎಂದಿನಂತೆ ಈ ವರ್ಷವೂ ಸ್ತ್ರೀವಾದಿಗಳು 'ಸೌಂದರ್ಯ ಸ್ಪರ್ಧೆಗಳು ಸೆಕ್ಸ್ಟ್ ಜಾನುವಾರು ಮಾರುಕಟ್ಟೆಗಳು' ಎಂದು ಪ್ರತಿಭಟಿಸಿದರು. ವ್ಯತ್ಯಾಸವಿಷ್ಟೆ ಈ ಬಾರಿ ಬಹಳಷ್ಟು ಜನ ಸ್ತ್ರೀವಾದಿಗಳು ಹೇಳುವುದು ದಿಟವೆಂದರು. ಇತ್ತೀಚಿನ ಇಂಗ್ಲಿಷ್ ಪತ್ರಿಕೆಯ ಸರ್ವೆಯಂತೆ, ಶೇಖಡಾ ಐವತ್ತನಾಲ್ಕು ಮಂದಿ ಸ್ತ್ರೀವಾದಿಗಳ ಹೇಳಿಕೆಯನ್ನು ಬೆಂಬಲಿಸುತ್ತಾರೆ.

ವಾದ ವಿವಾದಗಳೇನೇ ಇರಲಿ, ಇಂದು ನಮ್ಮ ಎಳೆಯ ಹುಡುಗಿಯರ ಎದುರು ತೆರೆದಿರುವ ಎಷ್ಟೋ ಗ್ಲಾಮರಸ್ ಹುದ್ದೆಗಳಲ್ಲಿ ಸೌಂದರ್ಯ ರಾಣಿಯರಾಗುವುದೂ ಒಂದಾಗಿದೆ. ಡಾಕ್ಟರ್, ಇಂಜಿನಿಯರ್, ಪೈಲೆಟ್ ಮುಂತಾದ ಹುದ್ದೆಗಳು ಅನಾಕರ್ಷಕವಾಗಿ ಕಾಣುತ್ತವೆ.

ವರ್ಷಗಟ್ಟಲೆ ಹಗಲು ರಾತ್ರಿ ಓದಿ, ಕೇವಲ ಕೆಲವು ಸಾವಿರ ರೂಪಾಯಿಗಳ ಸಂಬಳ ತರುವ, ಸದ್ದಿಲ್ಲದ ಸುದ್ದಿಯಾಗದ ಈ ಹುದ್ದೆಗಳು ಸಪ್ಪೆಯಾಗಿ ಕಾಣಬಹುದು. ಕಾರಣ ಡಾ. ಇಂದಿರಾ ಹಿಂದುಜಾ ಭಾರತದ ಮೊಟ್ಟಮೊದಲ ಪ್ರನಾಳ ಶಿಶು ತಯಾರಿಸಿದಾಗ ಅವರ ಮುಖವೇನೂ ಪತ್ರಿಕೆಯ ಮುಖ ಪುಟದಲ್ಲಿ ಇಷ್ಟಗಲ ಅಚ್ಚಾಗಲಿಲ್ಲ. ನಿವೇದಿತ ಬಾಸಿನ್ ಬೋಯಿಂಗ್ ವಿಮಾನದ ಜಗತ್ತಿನ ಅತ್ಯಂತ ಚಿಕ್ಕವಯಸ್ಸಿನ ಕ್ಯಾಪ್ಟನ್ ಆದದ್ದು ಪತ್ರಿಕೆಗಳಿಗೆ ಮುಖಪುಟ ಲೇಖನ ಮಾಡುವಷ್ಟು ದೊಡ್ಡ ಸುದ್ದಿಯಾಗೋಲ್ಲ. ಆದರೆ ಸೌಂದರ್ಯ ಸ್ಪರ್ಧೆಗಳು ಭಾರೀ ಸುದ್ದಿಯಾಗುವ ಅಬ್ಬರದ ಮೇಳಗಳು. ಪ್ರತಿ ಪತ್ರಿಕೆಯ ಮುಖ ಪುಟದಲ್ಲಿ ಅನೇಕ ಬಾರಿ ರಾರಾಜಿಸುವ ಗ್ಲಾಮರಸ್ ಪಂದ್ಯಗಳು. ಗೆದ್ದರೆ ಲಕ್ಷಗಟ್ಟಲೆ ಹಣದ ಆಕರ್ಷಣೆಗಳು. ಇದರ ಹಿಂದೆ ಕೋಟಿಗಟ್ಟಲೆ ಹಣ ಸುರಿದ ಕಂಪನಿಗಳು. ಹೀಗೆಂದೇ ಇವು ಮಾಧ್ಯಮದಲ್ಲಿ ಭಾರೀ ಸುದ್ದಿ ಮಾಡುತ್ತವೆ. ಸಮೂಹ ಮಾಧ್ಯಮಗಳು ವಿಜ್ಞಾನ, ಸಾಹಿತ್ಯ, ಕಲೆ, ವೈಮಾನಿಕ ಇಂಥಾ ಹತ್ತು ಹಲವು ರಂಗಗಳಲ್ಲಿ ಹೆಣ್ಣಿನ ಸಾಧನೆಯನ್ನು ಇಷ್ಟು ಪರಿಯಲ್ಲಿ ಬಿಂಬಿಸಿ, ಬಿತ್ತರಿಸುವುದಿಲ್ಲ, ಹಾಡಿ ಹೊಗಳುವುದಿಲ್ಲ. ಕಾರಣ, ಹೆಣ್ಣಿನ ನಿಜವಾದ ಸಾಧನೆಯನ್ನು ಪ್ರಾಯೋಜಿಸುವ ಕಂಪನಿಗಳೆಲ್ಲಿವೆ?

ಇಂದು ನಾವು ನಮ್ಮ ಹುಡುಗಿಯರ ಎದುರು ಹೊಸ ಮಾದರಿಗಳನ್ನು ಸೃಷ್ಟಿಸಬೇಕಿದೆ, ಹೊಸ ಪರ್ಯಾಯಗಳನ್ನು ನೀಡಬೇಕಿದೆ. ಕ್ಯಾಪ್ಟನ್ ಲಕ್ಷ್ಮಿ, ಕಿರಣ್ ಬೇಡಿ, ನಿವೇದಿತಾ ಬಾಸಿನ್ ಮುಂತಾದವರ ಸ್ತ್ರೀ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕಿದೆ. ನಮ್ಮ ಎಳೆಯ ಮಕ್ಕಳನ್ನು ಸಾಧನೆಯ ರಂಗಕ್ಕೆ ಆಹ್ವಾನಿಸಬೇಕಿದೆ. ಆದರೆ ಇದು ಹೇಗೆಂಬುದೇ ನಮ್ಮೆದುರು ನಿಂತಿರುವ ದೊಡ್ಡ ಸವಾಲು.

ಪ್ರೀತಿಯ ಅಚಲ

ಇತ್ತೀಚೆಗೆ ರೋಗಗ್ರಸ್ಥ ಮನಸ್ಸಗಳು ಮಹಿಳೆಯರನ್ನು ಯಾವಯಾವ ರೀತಿಯಲ್ಲಿ ಹಿಂಸಿಸುತ್ತಿವೆ ಎನ್ನುವುದನ್ನು ಕಂಡಾಗ, ಮಾನವೀಯತೆ ಎನ್ನುವ ಶಬ್ದಕ್ಕೆ ಬಹುಶಃ ಅರ್ಥವೇ ಪಲ್ಲಟವಾಗಿ ಬಿಡುತ್ತಿದೆಯೇನೋ ಎನ್ನುವ ಭಯವಾಗುತ್ತದೆ.

ಹದಿನೈದು ಮತ್ತು ಹತ್ತು ವರ್ಷದ ಎರಡು ಮಕ್ಕಳ ತಾಯಿ, ಉದ್ಯೋಗಸ್ಥೆ ಮಹಿಳೆಯೊಬ್ಬರು ನನ್ನ ಹತ್ತಿರ ಒಂದು ಸಣ್ಣ ದುಃಖ ತೋಡಿಕೊಂಡರು. ತುಂಬಾ ಸಂಪ್ರದಾಯಸ್ಥ ಮನೆಯ ಆ ಮಹಿಳೆ ಸದಾ ಚೂಡಿದಾರನ್ನೇ ಧರಿಸಬೇಕೆಂದು ಗಂಡನ ಕಡ್ಡಾಯವಂತೆ. ಸ್ಕೂಟಿಯಲ್ಲಿ ಕೆಲಸಕ್ಕೆ ಹೋಗುವ ಆಕೆ ಸೀರೆಯುಟ್ಟು ಸೆರಗನ್ನು ಪಿನ್ ಮಾಡಿದಾಗ ಎಡಭಾಗದಲ್ಲಿ ಬ್ಲೌಸ್ ಕೆಳಗೆ ಸ್ವಲ್ಪ ಹೊಟ್ಟೆ ಕಾಣಿಸುತ್ತದೆಯಲ್ಲ ಅದು ಆಕೆಯ ಗಂಡನ ದೃಷ್ಟಿಯಲ್ಲಿ ಅಶ್ಲೀಲವಂತೆ! ನಿಧಾನವಾಗಿ ವಿಚಾರಿಸಿದಾಗ ತಿಳಿಯಿತು. ಆ ಗಂಡನ ಚಾರಿತ್ರ್ಯವೇ ಶುದ್ಧವಿಲ್ಲ 'ತಾನು ಕಳ್ಳ ಪರರನ್ನು ನಂಬ'ಎನ್ನುವ ಗಾದೆಯಂತೆ! ಇಂಥ ರೋಗಗ್ರಸ್ಥಮನಸ್ಸುಗಳೇ ಹೆಣ್ಣಿಗೆ ಮುಖಕ್ಕೆ ಪರದೆ, ಮೈಗೆ ಬುರಖಾ ಇತ್ಯಾದಿ ತೊಡಿಸಿರುವುದು.

ಇದು ಒಂದು ಮನೆಯ ಹೆಂಡತಿಯ ಪಾಡಿನ ಸುದ್ದಿಯಾಯಿತು. ಇಂಥ ಒಂದು ರೋಗಗ್ರಸ್ಥ ಮನದ ವ್ಯಕ್ತಿ ಒಂದು ಸಂಸ್ಥೆಯ ಯಜಮಾನನಾದರೇ? ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ ಒಂದು ಪ್ರತಿಷ್ಠಿತ ಶಾಲೆ. ಇಲ್ಲಿಯ ಹೈಸ್ಕೂಲಿನ ಉಪಾಧ್ಯಾಯಿನಿಯರು ಪ್ರತಿನಿತ್ಯ ಶಾಲೆಗೆ ಬಂದೊಡನೆಯೇ ಕಡ್ಡಾಯವಾಗಿ ಕೋಟೊಂದನ್ನು ಹಾಕಿಕೊಳ್ಳಬೇಕು. ಒಮ್ಮೆ ಬೇಸಿಗೆಯ ಅತಿ ಶೆಖೆಯಲ್ಲಿ ಈ ಕೋಟನ್ನು ಧರಿಸಿ ಮೈಶಾಖ ಅತಿಯಾಗಿ ಒಬ್ಬ ಉಪಾಧ್ಯಾಯಿನಿ ಬವಳಿ ಬಂದು ಬಿದ್ದರೂ ಕೋಟಿನಿಂದ ರಿಯಾಯಿತಿ ಇಲ್ಲವಂತೆ! ಇದಕ್ಕೆ ಕಾರಣವೇನು ಗೊತ್ತೆ? ಅದೇ ! ಸೀರೆ ಸೆರಗನ್ನು ಪಿನ್ ಮಾಡಿಕೊಳ್ಳುವುದರಿಂದ ಸ್ವಲ್ಪಭಾಗ ಹೊಟ್ಟೆಕಾಣುತ್ತದೆ. ಆ ಶಾಲೆಯ ಗಂಡು ಮಕ್ಕಳು ಇಂಥ ದೃಶ್ಯ ನೋಡಿ ದಾರಿತಪ್ಪಿಬಿಡುತ್ತಾರಂತೆ !! ಈಗ ವೃದ್ಧಾಪ್ಯದಲ್ಲಿರುವ ಆ ಶಾಲೆಯ ಯಜಮಾನ ಬಹಳ ಹಿಂದೆ ಚಾರಿತ್ರ್ಯಹೀನ ಎನ್ನುವ ಕುಖ್ಯಾತಿಗೆ ಒಳಗಾಗಿದ್ದವನೇ!

ಒಂದು ಕಡೆಯಲ್ಲಿ ಸೌಂದರ್ಯಸ್ಪರ್ಧೆಯ ಹೆಸರಿನಲ್ಲಿ ಅಶ್ಲೀಲತೆಯ ಪ್ರದರ್ಶನ. ಟಿ.ವಿಯ ಜಾಹೀರಾತುಗಳು, ಚಲನಚಿತ್ರಗಳೂ ಮಹಿಳೆಯರನ್ನು ಶೋಷಣೆಯ ಪರಾಕಾಷ್ಠೆಗೆ ತಳ್ಳಿರುವುದನ್ನು ಯಾರಿಂದಲೂ ಹಿಡಿತಕ್ಕೆ ತರಲಾಗುತ್ತಿಲ್ಲ. ಮತ್ತೊಂದು ಕಡೆ ಪುರುಷನ ವಿಕೃತ ಕಾಮಕ್ಕೆ ಬಾಲವೇಶ್ಯೆಯರ ಬಲಿಯಾಗುತ್ತಿವೆ. ಇನ್ನೊಂದು ಕಡೆ ಹೀಗೆ ಮಹಿಳೆಯರ ದೈನಂದಿನ ಸರಳ ಬದುಕಿನಲ್ಲಿ ಇಲ್ಲದ ಒತ್ತಡ ಹೇರುತ್ತಾ, ತಮ್ಮೊಳಗೇ ಕೊಚ್ಚಿಕೊಂಡು ಹೋಗುತ್ತಿರುವ ನೈತಿಕತೆಯನ್ನು ಮತ್ತೆಲ್ಲಿಂದಲೋ ಹಿಡಿದಿಡುವ ಪ್ರಯತ್ನ!! ಎರಡೂ 'ಅತಿ'ಗಳೇ ಮತ್ತು ಎರಡು 'ಅತಿ'ಗಳಲ್ಲಿಯೂ ಬಲಿಯಾಗುತ್ತಿರುವವಳು ಮಾತ್ರ ಮಹಿಳೆಯೇ !!

ಶತಬಿಷಾ.

ನಾಳೆಯ ನಾರಿ: ಒಂದು ಪಾರ್ಶ್ವನೋಟ

ಮಹಿಳೆಯರಿಗೆ ಹಿಂದೆಂದಿಗಿಂತಲೂ ಶಿಕ್ಷಣಕ್ಕೆ ಹೆಚ್ಚಿನ ಅವಕಾಶಗಳು ಇಂದು ತೆರೆದಿವೆ. ಇದರ ಫಲವಾಗಿ ವಿದ್ಯಾವಂತರಾಗುವ ಸ್ತ್ರೀಯರು ಹಾಗೂ ಪುರುಷರ ಸಂಖ್ಯಾ ಪ್ರಮಾಣದ ನಡುವೆ ಹಿಂದೆ ಕಾಣಬರುತ್ತಿದ್ದ ಅಂತರ ಈಗ ಕ್ರಮವಾಗಿ ಕುಗ್ಗುತ್ತಿದೆ. ಹಿಂದಿನ ತಲೆಮಾರುಗಳಿಗೆ ಹೋಲಿಸಿದಲ್ಲಿ ಈಗ ಮಹಿಳೆಯರು ಮದುವೆಯಾಗುವ ಹೊತ್ತಿಗೆ ಸಾಕಷ್ಟು ಪ್ರೌಢರಾಗಿರುತ್ತಾರೆ, ಹೆಚ್ಚು ಸುಶಿಕ್ಷಿತರೂ ಆಗಿರುತ್ತಾರೆ. ಮಗುವಿನ ಜವಾಬ್ದಾರಿಯನ್ನು ಹೊರಲು ಭೌತಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ ಕೂಡ ತಾವು ಸಮರ್ಥರಾಗುವ ವರೆಗೂ ಮೊದಲ ಮಗುವನ್ನು ಪಡೆಯುವುದನ್ನೇ ಮುಂದೂಡುವವರ ಸಂಖ್ಯೆ ಕೂಡ ಇಂದು ಹೆಚ್ಚು.

ಒಬ್ಬ ಮನಶಾಸ್ತ್ರಜ್ಞರು ಅಭಿಪ್ರಾಯ ಪಡುವಂತೆ ''ಇಂದಿನ ಭಾರತೀಯ ಮಹಿಳೆ ತನ್ನ ಜವಾಬ್ದಾರಿಯನ್ನು ತಾನೇ ತೆಗೆದುಕೊಳ್ಳಲು ಸಿದ್ಧಳಿದ್ದಾಳೆ. ಹಿಂದಿನ ಪೀಳಿಗೆಗಳಲ್ಲಿ ಮಹಿಳೆಯನ್ನು ನಿರ್ಣಾಯಕವಾಗಿ ರೂಪಿಸುವವರು-ಅವಳ ತಂದೆ ಮತ್ತು ಗಂಡ ಎಂಬುದೇ ಪ್ರಬಲ ನಂಬಿಕೆಯಾಗಿತ್ತು. ಆದರೆ ಈ ಪುರಾಣ ಪ್ರತೀಕದ ಆಕೃತಿಯೇ ಈಗ ಬದಲಾದಂತೆ ಆಗಿದೆ''.

ಇಬ್ಬರ ಆದಾಯವುಳ್ಳಂಥ ಕುಟುಂಬಗಳ ಸಂಖ್ಯೆ ಕೂಡ ಹೆಚ್ಚುತ್ತಿದೆ. ಇಂತಹ ಕುಟುಂಬಗಳಲ್ಲಿ ನಿರ್ಧಾರಗಳನ್ನು ಮಾಡುವವರು ಇಬ್ಬರೂ ಆಗಿರುತ್ತಾರೆ. ತನ್ನ ಗಂಡನಿಗಿಂತ ಹೆಚ್ಚಲ್ಲದಿದ್ದರೆ ಕೊನೆಯ ಪಕ್ಷ ಅವನಷ್ಟೇ ದುಡಿದು ಗಳಿಸಿಕೊಡಬಲ್ಲ ಮಹಿಳೆ ಸಹಜವಾಗಿ ಒಬ್ಬ ವ್ಯಕ್ತಿಯಾಗಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ತನಗೂ ಹಕ್ಕಿದೆ ಎಂಬ ಬಗ್ಗೆ ಪ್ರಜ್ಞೆ ಹೊಂದಿರುತ್ತಾಳೆ. ನಿಜದಲ್ಲಿ ಎಷ್ಟೋ ಸಂದರ್ಭಗಳಲ್ಲಿ ಅವಳು ಆ ಪ್ರಕ್ರಿಯೆಯ ಭಾಗವೇ ಆಗಿರುವುದುಂಟು.

ಆಧುನಿಕ ಮಹಿಳೆಯ ಈ ಬೆಳವಣಿಗೆಯಲ್ಲಿ ಕೊರತೆಯ ಒಂದು ಮುಖವೂ ಇದೆ. ಮಹಿಳೆ ಸಾಮುದಾಯಿಕ ಸೇವಾಚಟುವಟಿಕೆಗಳಿಂದ ಹೆಚ್ಚು ಹೆಚ್ಚಾಗಿ ಕಾಣೆಯಾಗುತ್ತಿದ್ದು ಸಮುದಾಯಗಳು ಪುರುಷಲಕ್ಷಣಗಳನ್ನೇ ಬೆಳೆಸಿಕೊಳ್ಳುತ್ತಿವೆ. ಕುಟುಂಬದ ಒಳಗೂ ಹೊರಗಿನ ಉದ್ಯೋಗಕ್ಷೇತ್ರದಲ್ಲಿ ಹುಟ್ಟಿಕೊಳ್ಳುತ್ತಿರುವವರು ಸಮಾನತಾಭಾವಕ್ಕೆ ಹೀಗೆ ಪುರುಷೀಕರಣ ಅಥವಾ ಪುರುಷಲಕ್ಷಣವೇ ಎಲ್ಲೆಲ್ಲೂ ವ್ಯಾಪಿಸುತ್ತಿರುವುದು ಒಂದು ಮುಖ್ಯಕಾರಣ ಎಂದು ಸಾಮಾಜಿಕ ಬೆಳವಣಿಗೆಗಳ ಒಬ್ಬ ವಿಶ್ಲೇಷಣಾಕಾರರು ಸೂಚಿಸುತ್ತಾರೆ.

ಮೊದಲು ನಗರ ಪ್ರದೇಶಗಳಿಗಷ್ಟೇ ಸೀಮಿತವಾಗಿದ್ದ ಈ ಸ್ಥಿತಿ ಈಗ ಸಣ್ಣ ಊರುಗಳಲ್ಲಿ ಹಳ್ಳಿಗಳಲ್ಲಿ ಕೂಡ ಬೆಳೆಯತೊಡಗಿದೆ.

ನವದೆಹಲಿಯ ಡಿಫೆನ್ಸ್ ಇನ್ಸ್‌ಟಿಟ್ಯೂಟ್ ಆಫ್ ಸೈಕಲಾಜಿಕಲ್ ರಿಸರ್ಚ್ ಎಂಬ ಸಂಸ್ಥೆಯು ನಡೆಸಿರುವ ಒಂದು ಸಮೀಕ್ಷೆಯ ಪ್ರಕಾರ ಅಧಿಕಾರಿ ಮಹಿಳೆಯರು ಕೆಲಸದ ಒತ್ತಡಗಳನ್ನು, ಕಾರ್ಯಕ್ಷೇತ್ರದ ಬಿಕ್ಕಟ್ಟುಗಳನ್ನು ಪುರುಷ ಅಧಿಕಾರಿಗಳಿಗಿಂತ ಚೆನ್ನಾಗಿ ನಿರ್ವಹಿಸಬಲ್ಲರೆಂದು ತಿಳಿಸುತ್ತದೆ. ಸರಕಾರಿ ಕಾರ್ಯ ಯೋಜನೆಗಳಲ್ಲಿ ಹಿರಿಯ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ 80 ಪುರುಷರು ಮತ್ತು 80 ಮಹಿಳೆಯರನ್ನು ಒಳಗೊಂಡು ನಡೆಸಲಾದ ಈ ಸಮೀಕ್ಷೆಯಿಂದ ಮಹಿಳೆಯರು ತಮ್ಮ ಜವಾಬ್ದಾರಿಗಳನ್ನೂ, ಕರ್ತವ್ಯಗಳನ್ನೂ ಸುಲಭವಾಗಿ ನಿರ್ವಹಿಸಬಲ್ಲರೆಂಬುದು ಬೆಳಕಿಗೆ ಬಂದಿದೆ. ಇದಕ್ಕೆ ವಿರುದ್ಧವಾಗಿ ಪುರುಷರು ರಕ್ತದೊತ್ತಡ, ಹೃದ್ರೋಗಗಳಿಗೆ ಹೆಚ್ಚಾಗಿ ಬಲಿಯಾಗುವುದಲ್ಲದೆ, ಕಾರ್ಯನಿರ್ವಹಣೆಯಲ್ಲೂ ಅಸಮರ್ಪಕತೆ ತೋರುತ್ತಾರೆಂದು ಆ ಸಮೀಕ್ಷೆ ತೋರಿಸುತ್ತದೆ. ಬಹುರಾಷ್ಟ್ರೀಯ ಸಂಸ್ಥೆಯೊಂದರಲ್ಲಿ ಮ್ಯಾನೇಜರ್ ಆಗಿರುವ ಒಬ್ಬಾಕೆ ಹೇಳುತ್ತಾರೆ: ''ಮಹಿಳೆಯರು ಮನೆಯೊಳಗೂ ಬಹುರೂಪದ ಕ್ರಿಯಾಪಾತ್ರಗಳನ್ನು ದಕ್ಷತೆಯಿಂದ ನಿರ್ವಹಿಸುತ್ತಾ ಬಂದಿದ್ದಾರೆ. ಅವರು ತಮ್ಮ ಆ ಅನುಭವವನ್ನೇ ಈಗ ಉದ್ಯೋಗದ ವಲಯಕ್ಕೂ ವಿಸ್ತರಿಸಿಕೊಂಡಿದ್ದಾರಷ್ಟೆ. ಆದ್ದರಿಂದಲೇ ಅಗತ್ಯ ಬಿದ್ದಾಗ ಒಬ್ಬ ಮೇಲಧಿಕಾರಿಯಾಗಿ ಬಹಳ ಗಡುಸಾಗುವಂಥ ಮಹಿಳೆಯೇ ಸನ್ನಿವೇಶದ ಅವಶ್ಯಕತೆಯಿದ್ದಾಗ ತನ್ನ ಕೆಳಗಿನ ಕೆಲಸಗಾರರ ಬಗ್ಗೆ ಮಾತೃತ್ವವನ್ನೂ ತೋರಬಲ್ಲಳು. ಜಾಹೀರಾತು ಚಲನಚಿತ್ರಗಳ ನಿರ್ಮಾಪಕರೊಬ್ಬರು ಹೇಳುವ ಮಾತು ಈ ಮೇಲಿನ ವಿಚಾರವನ್ನೇ ಸಮರ್ಥಿಸುವಂತಿದೆ. ಅವರೆನ್ನುತ್ತಾರೆ; ''ನಾನು ಯಾವಾಗಲೂ ಮಹಿಳಾ ಸಹಾಯಕರನ್ನೇ ಪುರುಷ ಸಹಾಯಕರಿಗಿಂತ ಹೆಚ್ಚಾಗಿ ಇಷ್ಟಪಡುತ್ತೇನೆ. ಏಕೆಂದರೆ ಮಹಿಳೆಯರು ಹೆಚ್ಚು ಸುಸಂಘಟಿತವಾಗಿ, ಪ್ರಜ್ಞಾವಂತಿಕೆಯಿಂದ ಹಾಗೂ ನಿಷ್ಠೆಯಿಂದ ಕೆಲಸಮಾಡುತ್ತಾರೆ. ನನ್ನ ವೃತ್ತಿಗೆ ತುಂಬ ಅವಶ್ಯಕವಾದ ದೃಶ್ಯಾತ್ಮಕ ಸಂವೇದನೆ ಕೂಡ ಅವರಲ್ಲೇ ಹೆಚ್ಚಾಗಿರುತ್ತದೆ''.

ಹರ್ಬಲ್ ಸೌಂದರ್ಯ ಸಾಧನಗಳ ತಯಾರಿಕೆಯಂಥ ಸ್ವಂತ ಉದ್ಯಮಗಳನ್ನು ಅಂತಹುದೇ ಗೃಹಾಧಾರಿತ ವ್ಯಾಪಾರೋದ್ಯಮಗಳನ್ನು ಆರಂಭಿಸುವುದರಲ್ಲಿ, ಇಂದು

ಸ್ತ್ರೀಯರೂ ಹೆಚ್ಚಾಗಿ ಮುಂದಾಗುತ್ತಿದ್ದಾರೆ. ಬಂಡವಾಳ ಹೂಡಿಕೆಗಳಿಗೆ ಸಲಹಾಗಾರರಾಗಿರುವ ಒಬ್ಬರು ಹೇಳುವಂತೆ ಅವರಿಗೆ ಬರುತ್ತಿರುವ ಅರ್ಜಿಗಳಲ್ಲಿ ಶೇ. 15ರಷ್ಟು ಜನ ಮೊದಲ ಬಾರಿಗೆ ಉದ್ಯಮ ಸ್ಥಾಪಿಸ ಬಯಸುವ ಮಹಿಳೆಯರೇ ಆಗಿದ್ದಾರೆ. ಹೆಣ್ಣು ಮಕ್ಕಳೇ ನಡೆಸುವ ಗೃಹ ಕೈಗಾರಿಕೆಗಳು ಕಳೆದೊಂದು ವರ್ಷದಲ್ಲಿ ಶೇ. 15ರಷ್ಟು ಹೆಚ್ಚಿವೆ. ಅವುಗಳಲ್ಲಿ ಕೆಲಸ ಮಾಡಲೂ ಹೆಚ್ಚಾಗಿ ಮಹಿಳೆಯರನ್ನೇ ನೇಮಿಸಿಕೊಳ್ಳಲಾಗುತ್ತಿದೆ.

ಭಾರತೀಯರ ಇಂದಿನ ಬದುಕಿಗೆ ಬಹು ಮುಖ್ಯ ಸಾಧನವಾಗಿರುವ ದೂರದರ್ಶನ ಕೂಡ ಒಂದು ರೀತಿಯಿಂದ ಮಹಿಳೆಯ ಮುನ್ನಡೆಯನ್ನು ಪ್ರತಿಬಿಂಬಿಸುತ್ತದೆ. ಸದಾ ತ್ಯಾಗಮಯಿಯೇ ಆಗಿರುವ ತಾಯಿ, ಸಂಕೋಚ, ನಾಚಿಕೆ, ವೈಯಾರಿ ನಾಯಕಿ, ಕ್ಷುಲ್ಲಕವಾಗಿ ಆಡಂಬರ ತೋರಿಸುವ ವಿಲಾಸಿನಿ, ಖಳನಾಯಕಿ ಮುಂತಾದ ಪ್ರತಿಷ್ಠಾಪಿತ ಮಾದರಿಗಳು ಕಡಿಮೆಯಾಗಿದ್ದು ಇವುಗಳ ಬದಲಾಗಿ ಭಿನ್ನ ಭಿನ್ನ ಸ್ವಭಾವ, ವ್ಯಕ್ತಿತ್ವಗಳ ಮಹಿಳೆಯರನ್ನು ಕುರಿತ ಧಾರಾವಾಹಿಗಳನ್ನು ಈಗ ಬರೆಯಲಾಗುತ್ತಿದೆ.

ಪುರುಷರಿಂದ ಅಡೆತಡೆಗಳಿಗೆ ಒಳಗಾಗದೆಯೇ ಉದ್ಯಮಗಳನ್ನು ನಡೆಸಬಲ್ಲವರು, ತಮ್ಮ ಬದುಕಿಗಾಗಿ ಪುರಷರನ್ನೇ ಅವಲಂಬಿಸಬೇಕಾಗಿರದವರು, ನಿರ್ದಾಕ್ಷಿಣ್ಯವಾಗಿ ಪುರುಷರನ್ನು ಬದುಕಿನ ಹೊರಗಿಟ್ಟೂ ನಿರ್ದಿಷ್ಟ ಗೊತ್ತು ಗುರಿಗಳಿಂದ ಕೆಲಸ ಮಾಡಬಲ್ಲವರೂ ಈಗ ಕಿರುತೆರೆಯಲ್ಲಿ ಚಿತ್ರಿತರಾಗುತ್ತಾರೆ. ಇವತ್ತಿನ ಪೀಳಿಗೆಗೆ ಇಂಥ ಬಲಿಷ್ಠ ಸ್ತ್ರೀ ಮಾದರಿಗಳು ಅವಶ್ಯಕವೂ ಹೌದು. ಆದರೆ ನಿಜ ಜೀವನದಿಂದಲೂ ಇವುಗಳನ್ನು ಆಯ್ದುಕೊಳ್ಳಲಾಗುತ್ತಿದೆಯೇ ಎಂಬುದು ಗಮನಿಸಬೇಕಾದ ವಿಚಾರ.

ಭವಿಷ್ಯದತ್ತ ನೋಡುವಾಗ ತುಂಬ ಖಚಿತವಾಗಿ ಕಾಣುವ ಸಂಗತಿ ಎಂದರೆ ಬದಲಾವಣೆ. ಯಾವುದೇ ಕ್ಷೇತ್ರದಲ್ಲಾಗಲಿ ಮೊದಲಗಿತ್ತಿಯರಾದವರು ಸಂರಕ್ಷಕ ಕಳಕಳಿ, ಪ್ರೀತಿಯಂಥ ಸ್ತ್ರೀ ಮೌಲ್ಯಗಳನ್ನು, ಪುರುಷ ಪ್ರಪಂಚದಲ್ಲಿ ತಾವು ಪಡೆದುಕೊಂಡ ಕುಶಲತೆಗಳ ಜೊತೆ ಬೆರೆಸುವ ಮೂಲಕ ಜಗತ್ತನ್ನೇ ಬದಲಾಯಿಸ ತೊಡಗಿದ್ದಾರೆ. Mega trends for women ಎಂಬ ಗ್ರಂಥದ ಲೇಖಕರು ಹೇಳುವ ಹಾಗೆ ಒಂದು ಚಳವಳಿಯ ಶಕ್ತಿಗಳೇ ಅತಿ ಪ್ರಬಲವಾಗಿ, ಸರ್ವಶಕ್ತವೆಂಬಂತೆ ತೋರತೊಡಗುವುದು ಒಂದು ನೀತಿರಾಹಿತ್ಯ ಸ್ಥಿತಿಯನ್ನೂ ಸೃಷ್ಟಿಸಿಬಿಡಬಹುದು. ಆದರೆ 20ನೆಯ ಶತಮಾನದ ಈಚಿನ ಇತಿಹಾಸ ಒಂದನ್ನಂತೂ ಸಾಬೀತು ಪಡಿಸುತ್ತದೆ - ಒಂದು ವಿಚಾರಕ್ಕೆ ತಕ್ಕ ಕಾಲ ಕೂಡಿ ಬಂದಾಗ ಹಳೆಯ ವ್ಯವಸ್ಥೆ ಕೊನೆಗೊಳ್ಳಲೇಬೇಕು. ಅದನ್ನು ಯಾರೂ ತಡೆಯಲಾರರು.

ಹೊಸ ಶತಮಾನದಲ್ಲಿ ಮಹಿಳೆಯರು ನೆನಪಿಡಲೇ ಬೇಕಾದಂಥ ಮುದ್ರೆಯನ್ನು ಮೂಡಿಸುವ ಕಾಲ ಹತ್ತಿರ ಬಂದಿದೆ. ಕ್ರಿ.ಶ. 2000ದಲ್ಲಿ ಅತಿಮಾನುಷ ವೀರರು ಮಾತ್ರವೇ ಈ ಭೂಮಿಯ ಏಕೈಕ ರಕ್ಷಕರಾಗಿರುವುದಿಲ್ಲ. ಪುರುಷರಿಗೆ ಸಮಾನ ಭಾಗದಾರಿಕೆಯಲ್ಲಿ ಕೆಲಸ ಮಾಡಬಲ್ಲ, ಇಂದು ಕೆಲವೇ ರೀತಿಗಳಲ್ಲಿ ಮೊದಲು ಈ ದಿಕ್ಕಿನತ್ತ ಹೆಜ್ಜೆ ಇಟ್ಟಿರುವ ಅನೇಕಾನೇಕ ಸಂಖ್ಯೆಯಾಗಿ ಬೆಳೆದು ಈ ಭೂಮಿಯ ರಕ್ಷಕರಾಗುತ್ತಾರೆ.

(ವಿವಿಧ ಪತ್ರಿಕೆಗಳಿಂದ ಸಂಗ್ರಹಿತ)

-ಟಿ. ಎನ್. ಸುಮಿತ್ರಾಬಾಯಿ.

ಸಿನಿ ಸ್ವಾರಸ್ಯ

ಚಿತ್ರ 'ಬೇನಾಮ್ ಬಾದಶಾ', ಇದೇ ಯುಗದಲ್ಲಿ ತೊಂಭತ್ತರ ದಶಕದಲ್ಲಿ ತಯಾರಾದದ್ದು. ದೃಶ್ಯ, ಮದುವೆಯ ಮುಹೂರ್ತದ ಸಂಭ್ರಮ. ಮದುವೆ ಮನೆಯ ಗದ್ದಲವೋ ಗದ್ದಲ. ಆದರೆ ವಿನಾಶ್ಚರ್ಯ ಸಾಲಂಕೃತ ವಧುವಿನ ಕೋಣೆಗೆ ಗೂಂಡಾ ನುಗ್ಗಿ ಆರಾಮಾಗಿ ಅವಳ ಮಾನಹರಣ ಮಾಡುವವರೆಗೂ ಯಾರಿಗೂ ಅದು ತಿಳಿಯುವುದೇ ಇಲ್ಲ. ತಿಳಿದೊಡನೆ ಗೂಂಡಾ ಹಿಡಿಯುವುದಾಗಲೀ, ಬಡಿಯುವುದಾಗಲೀ ಪೋಲಿಸರನ್ನು ಕರೆಯುವುದಾಗಲೀ ಮುಖ್ಯ ವಿಷಯವಲ್ಲ, 'ಈಗ ಮದುವೆ ನಡೆಯಬೇಕೆ? ಎಂಬುದಷ್ಟೆ ಪ್ರಶ್ನೆ. 'ಇದರಲ್ಲಿ ನಿನ್ನ ತಪ್ಪಿಲ್ಲ. ನಾನು ವರಿಸುತ್ತೇನೆ' ಎಂದು ವರ ಎಂದರೂ, ನಮ್ಮ ಅಖಂಡ ನಾಯಕಿ ನಾರೀಮಣಿ ಒಪ್ಪಲು ಸಾಧ್ಯವೆ? 'ಹೊಸಕಿದ ಹೂ' ದೇವರ ಮುಡಿಗೇರಬಲ್ಲದೆ? ಮತ್ತೆ ನಾಯಕಿ ನೇಣು ಹಾಕಿಕೊಂಡಳೇ? ಇಲ್ಲ, ಶ್ರೀಮಂತ ಮನೆಯ, ವಿದ್ಯಾವಂತ ನಾಯಕಿ ಆ ಗೂಂಡಾ ಇರುವ ಗಲ್ಲಿಗೆ ಹೋಗಿ ಝೂಂಡಾ ಊರಿ 'ತನಗೆ ತಗುಲಿರುವ ಕಳಂಕ, ಕಳಂಕ ತಂದವನೇ ಸಿಂಧೂರ ತುಂಬಿದರೆ ಅಳಿಸಿ ಹೋಗುತ್ತದೆ' ಎಂಬ ಅಖಂಡ ನಂಬಿಕೆಯಲ್ಲಿ ಈ ಗೂಂಡಾನ ಮನಗೆಲ್ಲುತ್ತಾಳೆ. ಸ್ವಾಮಿ, ಹಿಂದೆಲ್ಲ ನಮ್ಮ ಚಿತ್ರ ನಿರ್ದೇಶಕರು ಮಾನಭಂಗಕ್ಕೆ ಆತ್ಮಹತ್ಯೆ ಒಂದನ್ನೇ ದಾರಿ ತೋರುತ್ತಿದ್ದರು, ಇಂದಿನ ನಿರ್ದೇಶಕರು ತೋರುವ ಈ ಆಧುನಿಕ ಹಾದಿಗಳನ್ನು ನೋಡಿದರೆ, ಪ್ರೇಕ್ಷಕರು ನೇಣು ಹಾಕಿಕೊಳ್ಳುವುದೇ ಉತ್ತಮ ಎನಿಸುತ್ತದೆ.

ಎನ್. ಸಿ.

ಮಹಿಳೆ-ಒಂದು ಅಧ್ಯಯನ

ಮಹಿಳೆ - ಒಂದು ಅಧ್ಯಯನ (ಲೇಖನ ಸಂಗ್ರಹ)
ಡಾ. ಜ್ಯೋತ್ಸ್ನಾ ಕಾಮತ್, ಪುಟ - 104,
ಬೆಲೆ : ರೂ. 30/-
ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈ.ಲಿ. 1999

ಮಹಿಳೆಯನ್ನು ಪೌರಾಣಿಕ, ಐತಿಹಾಸಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿರುವುದು ನಿಜವಾಗಲು ಒಂದು ಒಳ್ಳೆಯ ಪ್ರಯತ್ನ. ಡಾ॥ ಜೋತ್ಸ್ನಾ ಕಾಮತ್ ಅವರು ಅತ್ಯಂತ ಪರಿಶ್ರಮದಿಂದ ಆಳವಾದ ಅಧ್ಯಯನ ಮಾಡಿ ವಸ್ತುನಿಷ್ಠತೆಯಿಂದ ಲೇಖನಗಳನ್ನು ಸಿದ್ಧಪಡಿಸಿದ್ದಾರೆ. ನಮ್ಮ ಭಾರತದ ಮಹಿಳೆಯರ ಈಗಿನ ಸ್ಥಾನ, ಸಮಸ್ಯೆ, ಪರಿಹಾರಗಳನ್ನು ಕಂಡುಕೊಳ್ಳುವುದಕ್ಕೆ ಪ್ರಾಚೀನ ಇತಿಹಾಸ, ಪೌರಾಣಿಕ ಕಥೆ ಮುಂತಾದವುಗಳನ್ನು ಅಧ್ಯಯನ ಮಾಡಿ ವಿಮರ್ಶಿಸುವ ಅಗತ್ಯವಿದೆ. ಹಾಗೆ ಮಾಡುವಾಗ ವಸ್ತುನಿಷ್ಠವಾಗಿರುವ ಜೊತೆಗೆ ಶಾಸ್ತ್ರ, ನೀತಿ, ಆಚರಣೆಗಳು ಮಹಿಳೆಯರ ಮೇಲೆ ಮತ್ತು ಸಮಾಜದ ಮೇಲೆ ಯಾವ ರೀತಿಯ ಪ್ರಭಾವ ಬೀರಿದವು? ಅವುಗಳಿಗೂ ಮಹಿಳೆಯರ ಈಗಿನ ಪರಿಸ್ಥಿತಿಗೂ ಸಂಬಂಧವಿದೆಯೆ ? ಸಂಬಂಧವಿದ್ದು ಅವುಗಳ ಪರಿಣಾಮ ಪ್ರತಿಕೂಲವಾಗಿದ್ದರೆ ಅವುಗಳನ್ನು ಹೇಗೆ ಬದಲಾಯಿಸಬೇಕು ಎಂದು ಕೂಡ ನೋಡಬೇಕಾಗುತ್ತದೆ. ಅವುಗಳನ್ನು ಕೇವಲ ವಸ್ತುನಿಷ್ಠವಾಗಿ ಓದಿದರೆ ಸಾಲದು ಅನಿಸುತ್ತದೆ.

ಇನ್ನೂ ಲೇಖನಗಳನ್ನು ಪ್ರತ್ಯೇಕವಾಗಿ ತೆಗೆದುಕೊಂಡರೆ ಮೊದಲನೆ ಲೇಖನ ಲಜ್ಜಾಗೌರಿ ಪ್ರತೀಕ-ಅಧ್ಯಯನ ಸಂಶೋದನೆ ದಾಖಲೆಗಳ ಆಧಾರದಿಂದ ಕೂಡಿದೆ. ವೈಯಕ್ತಿಕವಾಗಿ ನನಗೆ ಹೆಣ್ಣು ಮತ್ತು ಪ್ರಕೃತಿಯನ್ನು ಸಮೀಕರಿಸುವುದೇ ಒಂದು ಪ್ರಶ್ನೆಯಾಗಿದೆ. ಈ ಸಮೀಕರಣದಿಂದ ಹೆಣ್ಣಿಗೆ ಪೂಜಾ ಸ್ಥಾನವನ್ನು ನೀಡಿ ಒಬ್ಬ ವ್ಯಕ್ತಿಯಾಗಿ ನೀಡಬೇಕಾಗಿದ್ದ ಸ್ಥಾನವನ್ನು ನೀಡುವುದರಲ್ಲಿ ಸಮಾಜವು ವಿಫಲವಾಗಿದೆ. ಹೆಣ್ಣನ್ನು ಎಲ್ಲಾ ಅವಕಾಶಗಳಿಂದ ವಂಚಿಸಿ ಪೂಜಾ ಸ್ಥಾನಕ್ಕೇರಿಸುವ ಆಚರಣೆ ಬೇಕಾಗಿದೆಯೇ? ಉತ್ಖನನದಲ್ಲಿ ಸಿಕ್ಕ ವಿಗ್ರಹಗಳಿಗೆ ಪೌರಾಣಿಕ ಕಥೆಗಳ ಹಿನ್ನೆಲೆಯನ್ನು ನೀಡಿ ಪ್ರತಿಯೊಂದನ್ನು ಕೂಲಂಕುಶವಾಗಿ ವಿವರಿಸಿದ್ದಾರೆ. ಪ್ರಕೃತಿ ಮತ್ತು ಹೆಣ್ಣನ್ನೂ ಹೋಲಿಸಿ ಪೂಜಿಸುವ ವಿಷಯದಲ್ಲಿ ನನಗೆ ವಿರೋಧವಿರುವುದರಿಂದ ಮತ್ತು ಧಾರ್ಮಿಕ ಆಚರಣೆ, ಪುರಾಣ ಕಥೆಗಳು, ಶಬ್ದಗಳ ಬಳಕೆ ಕುರಿತು ಆಳವಾದ ಅಧ್ಯಯನದ ಹಿನ್ನೆಲೆಯಲ್ಲಿರು ವುದರಿಂದ ಈ ಲೇಖನವನ್ನು ವಿವರವಾಗಿ ವಿಮರ್ಶಿಸಲು ಹೋಗುವುದಿಲ್ಲ. ಲೇಖನದ ಕೊನೆಯಲ್ಲಿ ಲೇಖಕಿಯು ಕೊಟ್ಟಿರುವ ಹೇಳಿಕೆಗಳು ಮಹಿಳಾ ಅಧ್ಯಯನದ ದೃಷ್ಟಿಕೋನದಿಂದ ವಿರೋಧಾಭಾಸವಾಗಿದೆ. ಸರ್ಕಾರವು ಬೆತ್ತಲೆ ಸೇವೆಯನ್ನು ನಿಲ್ಲಿಸಿದ್ದು ಅಪರಾದವೇನೋ ಎಂಬ ಹೇಳಿಕೆ - ''ನಾಗರೀಕರು, ಸುಸಂಸ್ಕೃತರು ಅನಿಸಿಕೊಂಡ ಒಂದು ವರ್ಗದ ಜನ ಈ ಸೇವೆಗೆ ಅಶ್ಲೀಲತೆ ಹಾಗು ಲೈಂಗಿಕ ಸ್ವಚ್ಛಂದತೆಯ ಲೇಪ ಹಚ್ಚಿ ಹುಯಿಲೆಬ್ಬಿಸಿದ್ದೇ ಸರ್ಕಾರದ ಕ್ರಮಕ್ಕೆ ಕಾರಣವಾಗಿತ್ತು'', ಭಕ್ತ ತಾದಾತ್ಮ ಹೊಂದುವುದು, ಹರಕೆ ಉದ್ದೇಶ ಬಿಟ್ಟು ಇನ್ಯಾವ ಭಾವನೆಯಿರುತ್ತಿರಲಿಲ್ಲ . ಬೆತ್ತಲೆ ಸೇವೆಯನ್ನು ಪ್ರಾಚೀನವಾದುದು, ನಿರುಪದ್ರವಿಯಾದ, ಧಾರ್ಮಿಕ ಸಂಪ್ರದಾಯ ಎಂದು ಹೇಳಿ ಬೆಂಬಲಿಸುವಂತಹ ಹೇಳಿಕೆ ನೀಡಿದ್ದಾರೆ. ಆಧುನಿಕತೆಯ ಹೆಸರಿನಲ್ಲಿ ಸ್ತ್ರೀಯರ ಅಂಗ ಪ್ರದರ್ಶನವನ್ನು ಸ್ತ್ರೀವಾದವು ವಿರೋಧಿಸುತ್ತದೆ. ಅದೇ ರೀತಿ ಬೇರೆ ಬೇರೆ ಹೆಸರಿನಲ್ಲಿ ಹೆಣ್ಣನ್ನು ಪೂಜಿಸುವುದನ್ನು ವಿರೋಧಿಸುತ್ತದೆ.

ಪ್ರಾಚೀನ ಸ್ತ್ರೀ ಶಿಕ್ಷಣದ ಬಗ್ಗೆ ಹೇಳುವಾಗ ಲೇಖಕಿಯು ಶಿಕ್ಷಣದ ವಿವಿಧ ಪ್ರಕಾರಗಳಲ್ಲಿ ಸ್ತ್ರೀಯರು ಸಾಧನೆಗೈದಿರುವುದನ್ನು ಉದಾಹರಣೆಗಳ ಸಮೇತ ವಿವರಿಸಿದ್ದಾರೆ. ಆದರೆ ಈ ಶಿಕ್ಷಣದ ಅವಕಾಶ ಯಾವ ವರ್ಗದ ಮಹಿಳೆಯರಿಗೆ ಸಿಗುತ್ತಿತ್ತು ಎಂದು ನೋಡಿದಾಗ ಲೇಖನವೇ ಸ್ಪಷ್ಟಪಡಿಸುವಂತೆ ಬ್ರಾಹ್ಮಣ ಮತ್ತು ಕ್ಷತ್ರಿಯ ಕುಲದ ಸ್ತ್ರೀಯರಿಗೆ ಮಾತ್ರ ಶಿಕ್ಷಣ ಸಿಗುತ್ತಿತ್ತು. ಅವರವರ ಕುಲದ ವೃತ್ತಿಗೆ ತಕ್ಕಂತೆ ಸ್ತ್ರೀಯರಿಗೂ ಶಿಕ್ಷಣ ಸಿಗುತ್ತಿತ್ತು ಎಂದು ಹೇಳಲಾಗಿದೆ. ಕೇವಲ ಪದಗಳ ಬಳಕೆಯಿಂದ ಶ್ಲೋಕ ಶಾಸನಗಳಲ್ಲಿ ಕಂಡುಬರುವ ಕೆಲವೇ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಇದ್ದಿರಬಹುದು, ಊಹಿಸಬಹುದು, ಸಿಕ್ಕಿರಬಹುದು ಎಂದು ಹೇಳಿ ಸ್ತ್ರೀಯರಿಗೆ ಶಿಕ್ಷಣದ ಅವಕಾಶ ಸಿಗುತ್ತಿತ್ತು ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ ? ಗಣಿಕೆಯರಿಗೆ ವಿವಿಧ ಕಲೆಗಳಲ್ಲಿ ಶಿಕ್ಷಣ

ನೀಡಲಾಗುತ್ತಿತ್ತು ಎಂದು ತಿಳಿದು ಬಂದರೂ ಅವರಿಗೆ ಶಿಕ್ಷಣ ನೀಡುತ್ತಿದ್ದುದರ ಉದ್ದೇಶವನ್ನು ಪ್ರಶ್ನಿಸಬೇಕಾಗುತ್ತದೆ. ಸಾವಿರಾರು ವರ್ಷಗಳ ಹಿಂದೆ ವಾತ್ಸಾಯನ ಹೇಳಿದ "ಗಂಡನ ಗಡೀ ಪಾರು ಅಥವಾ ವಿದೇಶ ವಾಸ, ವೈಧವ್ಯ ಮತ್ತಿತರ ಸಂಕಟ ಪ್ರಸಂಗಗಳಲ್ಲಿ ವಿದ್ಯೆಯನ್ನು ಹೆಣ್ಣು ತನ್ನ ಜೀವನಕ್ಕೆ ಬಳಸಿಕೊಳ್ಳಬಹುದು ಎಂಬ ಮಾತು ಈಗಿನ ಸಮಾಜದಲ್ಲೂ ಹೆಣ್ಣು ಮಕ್ಕಳು ನಿರಾಶ್ರಿತರಾದಾಗ ಜೀವನದಲ್ಲಿ ಅಸಹಾಯಕ ಪರಿಸ್ಥಿತಿ ತಲುಪಿದಾಗ ಮಾತ್ರ ಅವರ ಶಿಕ್ಷಣದ ಬಗ್ಗೆ ಚಿಂತಿಸುವ ತಂದೆ ತಾಯಿಯವರ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ಸಾಮಾನ್ಯ ಸ್ತ್ರೀಗೆ ಪುರುಷನಂತೆ ವ್ಯಕ್ತಿಯಾಗಿ ಜ್ಞಾನಾರ್ಜನೆಗಾಗಿ, ಜೀವನೋಪಾಯಕ್ಕಾಗಿ ಶಿಕ್ಷಣವನ್ನು ನೀಡುವುದನ್ನೂ ಹಿಂದೆ ನಿರಾಕರಿಸಿರುವುದಕ್ಕೆ ಈ ಧರ್ಮ ಶಾಸ್ತ್ರಗಳು ಕಾರಣ ಎಂದು ಹೇಳಬಹುದಲ್ಲವೇ? ಶೇಕಡ 60ರಷ್ಟು ಸ್ತ್ರೀಯರು ಅನಕ್ಷರಸ್ತರಾಗಿರುವ ನಮ್ಮ ಸಮಾಜದಲ್ಲಿ ಸ್ತ್ರೀ ಶಿಕ್ಷಣದ ಪ್ರಾಮುಖ್ಯತೆಯನ್ನು ಹೇಳಲು ಪ್ರಾಚೀನ ಕಾಲದಲ್ಲಿ ಶಿಕ್ಷಣ ಪಡೆದು ಸಾಧನೆ ಮಾಡಿದ ಕೆಲವೇ ಮಂದಿಯ ಉದಾಹರಣೆಗಳನ್ನು ಹೆಸರಿಸಿ ವಿವರಿಸುವುದು ಖಂಡಿತ ಸ್ವಾಗತಾರ್ಹವಾದುದು. ಆದರೆ ಅದನ್ನೆ ಆಧಾರವಾಗಿಟ್ಟು ಕೊಂಡು ಪ್ರಾಚೀನ ಕಾಲದಲ್ಲಿ ಎಲ್ಲಾ ವರ್ಗದ ಸ್ತ್ರೀಯರಿಗೂ ಸಮಾನ ಶಿಕ್ಷಣ ಅವಕಾಶವಿತ್ತು ಎಂದು ಹೇಳಲು ಬರುವುದಿಲ್ಲ. ಲೇಖನದ ಕೊನೆಯಲ್ಲಿ ಕಂಡುಬರುವ ಅಂಶಗಳಿಂದ ಮತ್ತು ಒಟ್ಟು ಲೇಖನದಲ್ಲಿ ತಿಳಿದುಬರುವಂತೆ ಲೇಖಕಿಯು ಸಾಂಪ್ರದಾಯಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಆಧುನಿಕ ಶಿಕ್ಷಣದ ಸ್ಥೂಲ ವಿಮರ್ಶೆಯಿಂದ ಸ್ತ್ರೀ ಶಿಕ್ಷಣದ ಚೌಕಟ್ಟನ್ನು ಮಿತಿಗೊಳಿಸಲು ಪ್ರಯತ್ನಿಸಿದ್ದಾರೇನೋ ಅನ್ನಿಸುತ್ತದೆ.

ಮನುಸ್ಮೃತಿ, ಯಾಜ್ಞವಲ್ಕ್ಯ ಮುಂತಾದ ಶಾಸ್ತ್ರಗಳು ಮಹಿಳಾ ಅಧ್ಯಯನದ ದೃಷ್ಟಿಕೋನದಿಂದ ಕೆಲವು ಅಂಶಗಳನ್ನು ಬಿಟ್ಟರೆ ಉಳಿದಂತೆ ಸ್ತ್ರೀ ವಿರೋಧವಾಗಿವೆ. ಮಹಿಳೆಯರ ಕುರಿತು ಹೇಳುವ ಅನೇಕ ಅಂಶಗಳು ವಿವಾಹ, ಶಿಕ್ಷಣ, ಆಸ್ತಿ ಹಕ್ಕು, ಪರಾಧೀನತೆ, ಆದರ್ಶ ಗೃಹಣಿ ಮತ್ತು ಶೀಲದ ಬಗ್ಗೆ ಹೇಳುವ ಮಾತುಗಳೂ ಪ್ರಶ್ನಾರ್ಹವಾಗಿವೆ. ಒಂದೊಂದು ಅಂಶವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಬಹುದು. ಅವುಗಳನ್ನು ಓದಿದಾಗ ಮನಸ್ಸಿನಲ್ಲಿ ಕೋಪ, ವಿರೋಧ, ಗೊಂದಲಗಳು ಉಂಟಾಗುತ್ತವೆ. ಹಾಗಿರುವಾಗ ವಿವಾಹ ಮತ್ತಿತರ ವಿಷಯಗಳಲ್ಲಿ ಶಾಸ್ತ್ರಗಳು ಹೇಳುವುದನ್ನು ಸ್ತ್ರೀ ವಿರೋಧಿಯಾಗಿದ್ದರೂ ಪ್ರಶ್ನಿಸದೆ, ಟೀಕಿಸದೆ ಬರೆದಿರುವುದು ಗೊಂದಲಕ್ಕೀಡುಮಾಡುತ್ತದೆ. 'ಪಂಚಮ ವರ್ಣದ ಚಾಂಡಾಲಿಯರೂ ಸಹ ಸಹಗಮನ ಮಾಡಲಿ', ಪತ್ನಿಗೆ ಆಸ್ತಿ ಕೊಡಬೇಕು ಎಂದು ಮತ್ತು ಸ್ತ್ರೀ ಧನದ ಬಗ್ಗೆ ವಿಜ್ಞೇಶ್ವರನ ಹೇಳಿಕೆಗಳನ್ನು ಉದಾರ ಗುಣವೆಂದು ಪುನ ಪುನಃ ಹೇಳುತ್ತಾ ಯಜ್ಞವಲ್ಕ್ಯ ಮತ್ತು ಮನು ಹೇಳುವ ಅಂಶಗಳನ್ನು ಲೇಖನದುದ್ದಕ್ಕೂ ಪ್ರತಿಪಾದನೆ ಮಾಡಿರುವುದು ಕಂಡು ಬರುತ್ತದೆ.

ಸತಿ ಪದ್ಧತಿಯ ಲೇಖನವು ವಸ್ತುನಿಷ್ಠವಾಗಿದ್ದು ಲೇಖಕಿ ಹೇಳಿರುವಂತೆ ವೈಭವೀಕರಿಸುವ ಅಥವಾ ಪ್ರತಿಪಾದಿಸುವ ಉದ್ದೇಶವಿಲ್ಲದಿದ್ದರೂ ಬರೆದಿರುವ ಶೈಲಿ ಎಲ್ಲೋ ಒಂದು ಕಡೆ ವೈಭವೀಕರಿಸಿದ್ದಾರೇನೋ ಅನ್ನಿಸುತ್ತದೆ. ಈ ಕಾರಣದಿಂದಲೆ, 'ಸ್ತ್ರೀವಾದಿ ಸಂಶೋಧನಾ ವಿಧಾನವು' ಮಹಿಳಾ ವಿಷಯವನ್ನು ಅಧ್ಯಯನ ಮಾಡುವಾಗ ವಸ್ತು ನಿಷ್ಠತೆಯ ಜೊತೆಗೆ ವಿಷಯದ ಹಿನ್ನೆಲೆ, ಕಾರಣ, ಪರಿಣಾಮ, ವಾಸ್ತವಕ್ಕೆ ಕಾರಣ ಏನು ಎಂದು ತಿಳಿದು ಎಲ್ಲಿ ಹೇಗೆ ಬದಲಾವಣೆ ತರಬೇಕು ಎಂದು ತಿಳಿಯಲು ಕೂಡ ಪ್ರಯತ್ನಿಸಬೇಕು ಎಂದು ಹೇಳುತ್ತದೆ.

ಸತಿ ಪದ್ಧತಿಗೆ ಮಹಿಳೆಯರೇ ಕಾರಣ, ಉಮೇದ್ ಸಿಂಗ್‌ನ ಪತ್ನಿಯ ಮಾಸ್ತಿಕಲ್ಲು 'ದುರ್ದೈವದಿಂದ' ಸಿಗದಿದ್ದದು, 'ಮೆರೆದು' ಮಹಾಸತಿಯಾಗಿ ಮಿಂಚಿಹೋದ ನಾರಿ ಸಮೂಹ ಮುಂತಾದ ಪದಗಳ ಬಳಕೆ ವಿರೋಧಾಭಾಸವಾಗಿವೆ. ಐರಾವತಿ ಕರ್ವೆಯವರನ್ನು ಕನ್ನಡ ಓದುಗರಿಗೆ ಪರಿಚಯಿಸಿರುವುದು ಸೂಕ್ತವಾಗಿದೆ. ಬೆಳಕಿಗೆ ಬರದ ಇಂತಹ ಅಪೂರ್ವ ಮಹಿಳೆಯರನ್ನು ಅವರ ಚಿಂತನೆ, ಕಾರ್ಯ, ಅಧ್ಯಯನ, ಕೃತಿಗಳನ್ನು ಕುರಿತು ಪರಿಚಯಿಸುವ ಅಗತ್ಯ ತುಂಬ ಇದೆ. ಐರಾವತಿಯವರ ಕಾಲಾವಧಿಯನ್ನು ಸ್ಪಷ್ಟವಾಗಿ ಹೇಳಬೇಕಾಗಿತ್ತು.

ಪೌರಾಣಿಕ, ಶಾಸ್ತ್ರ, ಐತಿಹಾಸಿಕ ಹಿನ್ನೆಲೆಯಲ್ಲಿ ಮಹಿಳೆಯನ್ನು ಅಧ್ಯಯನ ಸಂಶೋಧನೆ, ದಾಖಲೆಗಳ ಆಧಾರದಲ್ಲಿ ನೋಡಲು ಡಾ॥ ಜೋತ್ಸ್ನಾ ಕಾಮತ್ ಅವರು ಪ್ರಯತ್ನಿಸಿರುವುದು ನಿಜವಾಗಲು ಒಂದು ಒಳ್ಳೆಯ ಕೆಲಸ. ಆದರೆ ಮಹಿಳಾ ಅಧ್ಯಯನದ ದೃಷ್ಟಿಯಿಂದ ಪ್ರಾಚೀನ ಸಂಸ್ಕೃತಿ, ಶಾಸ್ತ್ರ, ಆಚಾರ ವಿಚಾರಗಳನ್ನು ಕೇವಲ ವಸ್ತು ನಿಷ್ಠವಾಗಿ ನೋಡಿದ್ದು ವಿಮರ್ಶಾತ್ಮಕವಾಗಿ ಮತ್ತು ಮಹಿಳಾ ಪರ ದೃಷ್ಟಿಕೋನದಿಂದ ನೋಡಿಲ್ಲವೇನೋ ಎಂಬ ಭಾವನೆಯನ್ನು ಮೂಡಿಸುತ್ತದೆ.

ಹೇಮಲತ. ಎಚ್.ಎ
ಮೈಸೂರು.

ಶ್ರೀ ಸಾಮಾನ್ಯರೊಡನೆ ಸಂವಾದ

ಸಂದರ್ಶನಗಳೂ, ಸಂವಾದಗಳೂ ಅತಿ ಪ್ರಸಿದ್ಧರೊಡನೆಯೇ ಆಗಬೇಕಾಗಿಲ್ಲ. ಸಾಮಾನ್ಯರ ಚಿಂತನೆಗಳೂ ಅತಿ ಗಹನವಾಗಿಯೂ, ಅತಿ ವಿಚಾರಯೋಗ್ಯವೂ ಆಗಿರುವುದಕ್ಕೆ ಸಾಧ್ಯವಿದೆ ಎನ್ನುವುದಕ್ಕೆ ಶ್ರೀಮತಿ ತಾಹಿರಾ ದರ್ಗಾರವರೊಡನೆ ನಡೆಸಿದ ಸಂವಾದವೇ ಸಾಕ್ಷಿಯಾಗಿದೆ. ಅವರಲ್ಲಿ ಹುಟ್ಟುವ ಮುಗ್ಧನೆಲೆಯ ಚಿಂತನೆಗಳು, ಶುದ್ಧ ಜಾತ್ಯತೀತ ರಾಷ್ಟ್ರದ ಕನಸುಕಂಡ ವಿಚಾರವಾದಿಗಳಲ್ಲಿ ನಿಜಕ್ಕೂ ಚಿಂತನೆಯ ತರಂಗಗಳನ್ನೇ ಎಬ್ಬಿಸುವಂಥದ್ದು. ಅಚಲಾ ಇಂಥ ಒಂದು ಸಂವಾದವನ್ನು ನಿಮ್ಮ ಮುಂದಿಡುತ್ತಿದೆ.

ಅಚಲಾ- ಸಾಧಾರಣವಾಗಿ ಮುಸ್ಲಿಮರೆಲ್ಲರೂ ಕಟ್ಟಾ ಸಂಪ್ರದಾಯವಾದಿಗಳು ಎನ್ನುವ ಭಾವ ಮುಸ್ಲಿಮರಲ್ಲದವರಲ್ಲಿ ಇದೆ. ಈ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.

ತಾಹಿರಾ- ಕಟ್ಟಾ ಸಂಪ್ರದಾಯವೆಂದು ಯಾವುದಕ್ಕೆ ಹೇಳುತ್ತಿರೋ ನನಗೆ ಗೊತ್ತಿಲ್ಲ. ನಿಮ್ಮ ಮನೆಗಳಲ್ಲಿರುವಂತೆಯೇ ನಮ್ಮ ಮನೆಗಳಲ್ಲಿಯೂ ನಮಗೆ ಇಷ್ಟದಂತೆ ನಡೆದುಕೊಳ್ಳುವುದಕ್ಕೆ ಸ್ವಾತಂತ್ರ್ಯವಿತ್ತು. ಸ್ವಲ್ಪ ವಿದ್ಯಾವಂತ ಕುಟುಂಬ ನಮ್ಮದು. ನಾನು ಮೊದಲ ಮಗಳು. ಚೆನ್ನಾಗಿ ಓದುತ್ತಿದ್ದೆನೆಂದು ನನಗೆ ಉತ್ತೇಜನ ಕೊಡುತ್ತಿದ್ದರು. ನಾನೆಂದೂ ತುಂಬ ನಿಯಮಿತವಾಗಿ ನಮಾಜ್ ಮಾಡುತ್ತಿರಲಿಲ್ಲ. ನಮ್ಮ ತಾಯಿ ತಂದೆ ಸಹ ಹಾಗೆ ನಮಾಜ್‌ಗೆ ಕಟ್ಟಿಬಿದ್ದವರಲ್ಲ. ಹಬ್ಬದಲ್ಲಿ ವಿಶೇಷ ನಮಾಜ್ ಮಾಡಬೇಕಂತೆ. ನನಗಿದು ಗೊತ್ತೇ ಇರಲಿಲ್ಲ. ಏಕೆಂದರೆ ನಮಗೆ ಯಾವಾಗ ಬೇಕೆಂದರೆ ಆಗ ಹೊಸಬಟ್ಟೆ ಕೊಡಿಸುತ್ತಿದ್ದರು. ಹಬ್ಬ ಬಂದಾಗ ಮೊನ್ನೆತಾನೆ ಕೊಡಿಸಿದೆಯಲ್ಲ ಎಂದು ಸುಮ್ಮನಾಗಿ ಬಿಡುತ್ತಿದ್ದರು. ನನಗೆ ಕೋಪ. ಅದಕ್ಕೇ ಹಬ್ಬದ ದಿನ ನಾನು ಏನೂ ಮಾಡುತ್ತಿರಲಿಲ್ಲ. ನಮ್ಮ ತಂದೆ ತಾಯಿಯೂ ಒತ್ತಾಯ ಮಾಡುತ್ತಿರಲಿಲ್ಲ. ಮದುವೆಯಾದ ಮೇಲೆ ಗಂಡನ ಮನೆಯಲ್ಲಿ ಹಬ್ಬದ ದಿನ ನಮಾಜ್ ಮಾಡು ಎಂದರು. ಆಗ ನನ್ನ ಗುಟ್ಟು ಹೊರಬಿತ್ತು. ಏನೋ ಒಂದು ಮಾಡಿದೆ. ಅವರಿಗೂ ಅದೆಲ್ಲ ಗೊತ್ತಿಲ್ಲದ ಕಾರಣ ಕಿರಿಕಿರಿಯಾಗಲಿಲ್ಲ. ಗಂಡನ ಮನೆಯಲ್ಲೂ ನನ್ನ ಹುಟ್ಟಿದ ಮನೆಯ ವಾತಾವರಣವೆ ಇದ್ದದ್ದು. ಅಲ್ಲೂ ಯಾವರೀತಿಯ ಧರ್ಮದ ಒತ್ತಡಗಳೂ ಇರಲಿಲ್ಲ. ಈಗ ನೀವೆ ಹೇಳಿ ಎಲ್ಲ ಮುಸ್ಲಿಮರ ಮನೆಯ ಸಂಸ್ಕೃತಿಯೂ ಒಂದೇ ರೀತಿಯೆನ್ನುತ್ತೀರಾ?

ಅಚಲಾ- ಖಂಡಿತಾ ಇಲ್ಲ. ಒಂದು ಪ್ರಶ್ನೆ. ಸಣ್ಣಪುಟ್ಟ ಊರುಗಳಲ್ಲಿ ಒಂದು ರೀತಿಯ ಭಾವೈಕ್ಯ ಸಾಧ್ಯವಿದೆಯಲ್ಲವೇ?

ತಾಹಿರಾ- ಭಾವೈಕ್ಯ ಮುಂತಾದ ದೊಡ್ಡ ದೊಡ್ಡ ಪದ ನನಗೆ ಗೊತ್ತಿಲ್ಲ. ನನ್ನ ಬಾಲ್ಯದ ಮತ್ತು ನನ್ನ ತಾಯಿ ಮನೆಯ ಕೆಲವು ನಡವಳಿಕೆ ನಿಮಗೆ ಹೇಳುತ್ತೇನೆ. ನಮ್ಮ ಓಣಿಯಲ್ಲಿ ನಮ್ಮದೇ ಕೊನೆ ಮನೆ. ನಮ್ಮ ಮನೆಯ ಹಿಂದೆ ದೊಡ್ಡ ಹೊಲ. ನಮ್ಮ ಆ ಹೊಲದ ಬದುವಿನಲ್ಲಿ ಒಂದು ಕಲ್ಲಿತ್ತು. ನಮ್ಮ ತಾಯಿಗೆ ಸ್ವಪ್ನದಲ್ಲಿ ಒಂದು ದೇವತೆ ಬಂದು ನನಗೆ ಗುಡಿ ಕಟ್ಟಿಸು ಎಂದ ಹಾಗೆ ಆಗುತ್ತಿತ್ತಂತೆ. ನಮ್ಮ ತಂದೆ ಅಲ್ಲಿದ್ದ ಆ ಕಲ್ಲಿಗೆ ಒಂದು ಪುಟ್ಟ ಛಾವಣಿ ಮಾಡಿ ಗುಡಿ ಕಟ್ಟಿಸಿದರು. ಇವತ್ತಿಗೂ ನಮ್ಮ ತಂದೆ, ತಮ್ಮ ಪ್ರತಿದಿನ ಸ್ನಾನ ಮಾಡಿದ ಮೇಲೆ ಆ ಗುಡಿಗೆ ಹೋಗಿ ಕೈ ಮುಗಿದು ಬರುತ್ತಾರೆ. ಹಬ್ಬ ಹುಣ್ಣಿಮೆಗಳಲ್ಲಿ ಅಲ್ಲಿ ದೀಪ ಹಚ್ಚಿಡುತ್ತಾರೆ. ಇಷ್ಟೇ ಅಲ್ಲ, ನಮ್ಮ ಓಣಿಯಲ್ಲಿ ಕರೆಮ್ಮನ ಗುಡಿ ಇದೆ. ಮುಸ್ಲಿಮರೂ ಆ ದೇವಿಗೆ ನಡೆದು ಕೊಳ್ಳುತ್ತಾರೆ. ನಮ್ಮ ಮನೆಯಲ್ಲೂ, ಹೆರಿಗೆ ಕಷ್ಟವಾದರೆ, ಮಕ್ಕಳು ತೀರಾ ಅತ್ತರೆ, ದಢಾರ ಮುಂತಾದ ಅಮ್ಮ ಬಂದರೆ, ಅಷ್ಟೇ ಅಲ್ಲ ಹುಟ್ಟಿದ ತಕ್ಷಣವೂ, ಹಣ್ಣು ಕಾಯಿ ಎಣ್ಣೆ ಕರ್ಪೂರ ಕರೆಮ್ಮನಿಗೆ ಕೊಟ್ಟು ಬರುತ್ತೇವೆ. ನನ್ನ ತೌವರುಮನೆಯಲ್ಲೂ, ಗಂಡನ ಮನೆಯಲ್ಲೂ ನಮ್ಮ ಹಬ್ಬವನ್ನಷ್ಟೇ ಅಲ್ಲ ಊರಿನ ಎಲ್ಲ ಹಬ್ಬವನ್ನೂ ಮಾಡುತ್ತೇವೆ. ನಮ್ಮ ತಾಯಿಯಂತೂ ಪ್ರತಿ ಅಮಾವಾಸ್ಯೆ ದಿನ ಕಡಬು ಮಾಡಿ ಎಡೆಯಿಡುತ್ತಾರೆ. ಆಯುಧ ಪೂಜೆ ಸಹ ಮಾಡುತ್ತೇವೆ. ತೀರಾ ಶಿಷ್ಟಾಚಾರವಾಗಿಯಲ್ಲ. ನಮಗೆ ತೋಚಿದಂತೆ ಮಾಡುತ್ತೇವೆ. ಅದು ಬೇರೆ ಬೇರೆ ಎನ್ನುವ ವ್ಯತ್ಯಾಸವೇ ತಿಳಿದಿಲ್ಲ.

ಅಚಲಾ- ಈಗ ವಾತಾವರಣದಲ್ಲಿ ವ್ಯತ್ಯಾಸವಿದೆ ಎಂದು ಅನ್ನಿಸುತ್ತದೆಯೇ?

ತಾಹಿರಾ- ಹೌದು ಈಗ ಕೆಲವು ವಿಚಾರಗಳು ನೋವನ್ನು ಸಿಟ್ಟನ್ನು ತರಿಸುತ್ತವೆ. ಬೆಂಗಳೂರಿನ ಬಡಾವಣೆಯೊಂದರಲ್ಲಿ ಬಾಡಿಗೆಗೆ ಒಂದು ಮನೆ ಹಿಡಿದಿದ್ದೆವು. ಅವರಿಗೆ ನಾವು ಯಾರು ಎಂದು ಮೊದಲು ಗೊತ್ತಿರಲಿಲ್ಲವಂತೆ. ಮನೆ ಕೊಟ್ಟುಬಿಟ್ಟರು. ನಂತರ ಮನೆ ಖಾಲಿ ಮಾಡಲು ಆಗ್ರಹ ಪಡಿಸಿದರು. ಅವರೂ ನಮ್ಮ ಹಾಗೆ ಮಾಂಸಾಹಾರಿಗಳೇ. ಮತ್ತೆ ಕೆಲವರು ನೀವು ಎಷ್ಟು ಚೆನ್ನಾಗಿ ಸೀರೆ ಉಡುತ್ತೀರಿ ಎಂದು ಕೇಳುತ್ತಾರೆ. ನನಗಾಗ ಸಿಟ್ಟು ಬರುತ್ತದೆ. ಯಾಕೆ ನಾವು ಈ ನೆಲದವರಲ್ಲವೇ? ಈ ಉಡುಪು ನಮ್ಮದಲ್ಲವೇ? ಈ ದೇಶ, ಈ ಸಂಸ್ಕೃತಿ ಎಲ್ಲವೂ ನಮ್ಮದೇ ಅಲ್ಲವೇ? ಈ ಎಲ್ಲ ಗೊಂದಲಗಳು ನಮ್ಮಲ್ಲಿ ಶುರುವಾಗುತ್ತದೆ.

ಹೊರಗಿನ ಒತ್ತಡಗಳು ನಮ್ಮಲ್ಲಿ ಹಿತವಲ್ಲದ ಭಾವನೆಗಳನ್ನು ಯಾಕೆ ಹುಟ್ಟುಹಾಕಬೇಕು? ಎಂದು. ನಿಮ್ಮ ಉಡುಪೇ ಅಲ್ಲ, ನಿಮ್ಮ ಉಡುಪೇ ಬೇರೆ ಇದೆ, ನಿಮ್ಮ ದೇಶವೇ ಬೇರೆ ಇದೆ ಎನ್ನುವ ಭಾವನೆ ನಮ್ಮಂತಹ ಮುಗ್ಧರಲ್ಲಿ ಬರಿಸಿದರೆ ನಮಗೆ ಗಾಬರಿಯಲ್ಲದೆ ಮತ್ತೇನಾಗುತ್ತದೆ? ಇದರಿಂದ ನಮ್ಮ ಯುವಕ ಯುವತಿಯರಲ್ಲಿ ಕೂಡಾ ಎಂತಹ ಗೊಂದಲ ಉಂಟಾಗುತ್ತಿದೆ ಗೊತ್ತ? ನಮ್ಮ ಕುಟುಂಬ ಸ್ನೇಹಿತರ ಮಗ ರಜಪೂತರ ಹುಡಗ ಕೆಲಸ ಪ್ರಯುಕ್ತ ಇಲ್ಲಿಗೆ ಬಂದು ನಮ್ಮ ಮನೆಯಲ್ಲೇ ಉಳಿದುಕೊಂಡಿದ್ದ. ಆಗ ನಮ್ಮ ಮನೆಯಲ್ಲಿ ಮರಗೆಲಸ ನಡೆಯುತ್ತಿತ್ತು. ಟಿ.ವಿ.ಯಲ್ಲಿ ಕ್ರಿಕೆಟ್ ಬರುತ್ತಿತ್ತು. ಸ್ನೇಹಿತರ ಮಗ ಹೇಳಿದ ಪಾಕಿಸ್ತಾನ ಗೆದ್ದರೆ ನಮ್ಮ ಓಣಿಯ ಮುಸಲ್ಮಾನ ಹುಡುಗರು ಪಟಾಕಿ ಹೊಡೆಯುತ್ತಾರೆ ಎಂದು ನಾನು ಹೇಳಿದೆ 'ನಾನೂ ಅದೇ ಓಣಿಯಲ್ಲಿ ಹುಟ್ಟಿದವಳು ಬೆಳೆದವಳು ಹಿಂದೆಂದ ಹೀಗಾಗಿರಲಿಲ್ಲವಲ್ಲ' ಮುಸ್ಲಿಂ ಲೀಡರ್ ಚುನಾವಣೆಗೆ ನಿಂತರೆ ಎಲ್ಲ ಮುಸ್ಲಿಂ ಹುಡುಗರೂ ಅವರ ಹಿಂದೆ ಪ್ರಚಾರಕ್ಕೆ ಹೋಗುತ್ತಾರೆ ಎಂದ. ನಾನೆಂದೆ ಅದರಲ್ಲೇನು ತಪ್ಪು ನೀವೂ ಹೋಗುವುದಿಲ್ಲವೆ ಅಂತ. ಹೀಗೆ ನಮ್ಮ ಮಾತು ನಡೆಯಿತು. ಈ ಮಾತುಗಳನ್ನು ಕೇಳಿಸಿಕೊಂಡ ಮರಗೆಲಸದ ಚಿಕ್ಕ ಹುಡುಗ, (ಅವನು ಮುಸ್ಲಿಂ) ಮರುದಿನ ಹೇಳಿದ 'ಕ್ರಿಕೆಟ್‌ನಲ್ಲಿ ಈಗ ಪಾಕೀಸ್ತಾನವೇ ಗೆಲ್ಲಬೇಕು' ಅಂತ ನಾನು ಕೇಳಿದೆ 'ಯಾಕಪ್ಪ ನಿನಗಿಲ್ಲಿರಲು ಇಷ್ಟವಿಲ್ಲವೇ? ಈ ನೆಲದ ಅನ್ನ ನಿನಗೆ ಬೇಕು, ನೀರು ಬೇಕು, ನೀನು ಹುಟ್ಟಿದ್ದು ಇಲ್ಲಿ, ಬದುಕುತ್ತಿರುವುದು ಇಲ್ಲಿ ನಿನಗೆ ಪಾಕೀಸ್ತಾನಕ್ಕೆ ಏನು ಸಂಬಂಧ?' ಅಂತ. ಅವ ಮೆಲ್ಲಗೆ ಹೇಳಿದ 'ಪಾಕೀಸ್ತಾನ ಸೋತರೆ ಹಿಂದೂ ಹುಡುಗರು ನಮ್ಮ ಮುಂದೇ ಬಂದು ಪಟಾಕಿ ಹೊಡೆಯುತ್ತಾರೆ. ನಮ್ಮನ್ನು ಏನೇನೋ ತಮಾಷೆ ಮಾಡಿಕೊಂಡು ನಗುತ್ತಾರೆ' ಅಂತ. ಇದನ್ನು ಆ ರಜಪೂತ ಹುಡುಗ ಹೇಳಿರಲಿಲ್ಲ. ನೋಡಿ ಈ ಮರಗೆಲಸದ ಹುಡುಗ ಚಿಕ್ಕವನು ವಿದ್ಯೆಯಿಲ್ಲದವನು. ಅವನ ವಯಸ್ಸಿನಲ್ಲಿ ಇಂಥ ಭೇದ ಭಾವಗಳನ್ನು ಯಾರು ಹುಟ್ಟುಹಾಕುತ್ತಿದ್ದಾರೆ ?

ಅಚಲಾ- ಇಂಥ ವಾತಾವರಣಗಳು ಸಾಮಾನ್ಯರಲ್ಲಿ ಯಾವುದು ಸರಿ ಯಾವುದು ತಪ್ಪು ಅನ್ನುವ ಗೊಂದಲ ತರುತ್ತದೆ ಅಲ್ಲವೇ?

ತಾಹಿರಾ- ಹೌದು ನನಗೇ ಅನೇಕ ಸಲ ತುಂಬಾ ಗೊಂದಲ ಉಂಟಾಗುತ್ತದೆ. ನಮ್ಮವರ ಸ್ನೇಹಿತರ ಜೊತೆ ನಾವೆಲ್ಲ ಕುಟುಂಬದೊಂದಿಗೆ ಅನೇಕ ಸಲ ದೇವಸ್ಥಾನಕ್ಕೆ, ಮಠಗಳಿಗೆ ದರ್ಗಾಕ್ಕೆ ಸಹ ಹೋಗುತ್ತೇವೆ. ನಾನು ಯಾರಿಗೂ ಸಾಸ್ಟಾಂಗ ನಮಸ್ಕಾರ ಮಾಡುವುದಿಲ್ಲ. ಮಾಡಬಾರದು ಅಂತಲ್ಲ. ರೂಢಿಯಿಲ್ಲ ಅಷ್ಟೆ. ಒಮ್ಮೆ ನಮ್ಮವರ ಗೆಳೆಯರ ಅಣ್ಣ ಇದನ್ನು ಗಮನಿಸಿ ತಮ್ಮನ ಹೆಂಡತಿಗೆ ಹೇಳಿದರು. 'ನೋಡು ಅವಳು ನಮ್ಮ ದೇವರಿಗೆ ನಮಸ್ಕಾರ ಮಾಡಲಿಲ್ಲ' ಎಂದು. ಪುಣ್ಯಕ್ಕೆ ಆಕೆ ನನ್ನನ್ನು ಸರಿಯಾಗಿ ಗಮನಿಸಿದ್ದರು. ಅವಳು ದರ್ಗಾದಲ್ಲೂ ಮಾಡಲಿಲ್ಲ. ಅದೆಲ್ಲ ಅವರವರ ಇಷ್ಟ ಎಂದರು. ಇಂಥ ಸಮಯದಲ್ಲೆಲ್ಲಾ ನನಗೆ ಗೊಂದಲವಾಗುತ್ತದೆ. ನಮ್ಮ ಮಕ್ಕಳಿಗೆ ನಾವು ಯಾವ ಧಾರ್ಮಿಕ ನಡವಳಿಕೆಯ ಒತ್ತಡವನ್ನೂ ಹಾಕಿಲ್ಲ. ಈಗ ನಮ್ಮ ಸುತ್ತಮುತ್ತ ಸಮಾಜ ಏನೇನೋ ಬದಲಾವಣೆ ಮಾಡಿಕೊಳ್ಳುತ್ತಿರುವಾಗ ನಾವೂ ಏನಾದರೂ ಕಟ್ಟುಪಾಡುಗಳನ್ನು ಹಾಕಿಕೊಳ್ಳಬೇಕೇನೋ ಎನಿಸುತ್ತದೆ.

ಸುದ್ದಿ ವೈಭವ!

ಸುದ್ದಿಯಲ್ಲಿರುವುದು, ಸುದ್ದಿ ಮಾಡುವುದು ಕೆಲವರಿಗೆ ಹುಟ್ಟಿನಿಂದಲೇ ಬಂದದ್ದು. ಈಗ ಹೀಗೆ ಸುದ್ದಿಯಲ್ಲಿರುವವರು ಮಲೆಯಾಳಂ ಲೇಖಕಿ ಮಾಧವಿಕುಟ್ಟಿ/ಕಮಲಾದಾಸ್. ಬಹುಧರ್ಮೀಯರ ಈ ನಾಡಲ್ಲಿ ಧರ್ಮಾಂತರಗಳು ಹಲವಾರು ಕಾರಣಗಳಿಗೆ ನಡೆಯುತ್ತವೆ. ಅವು ಕೇವಲ ವೈಯಕ್ತಿಕ, ಖಾಸಗಿ ಪ್ರಕರಣಗಳಾಗಿ ಮಾತ್ರ ಉಳಿಯದೆ ಸಮುದಾಯದ ಪ್ರತಿಷ್ಠೆಯ, ಆತಂಕದ ಸಂದರ್ಭಗಳೂ ಆಗಿವೆ. ಆದರೂ ತಮ್ಮ ಕೃತಿಗಳ ಮೂಲಕ ಹದಿಹರೆಯದವರ ಭಾವನೆ, ಅನಿಸಿಕೆಗಳಿಗೆ ರೋಚಕವಾಗಿ 'ಶಾಕ್' ಕೊಟ್ಟಿರುವ ಕಮಲಾದಾಸ್ ಈಗ ತಮ್ಮ ಓದುಗರಿಗೆ ಸಮಾಜ ಬಾಂಧವರಿಗೆ 'ಸುರೈಯಾ' ಆಗುವುದರ ಮೂಲಕ ವಿಸ್ಮಯವುಂಟು ಮಾಡಿದ್ದಾರೆ.

ಈ ಧರ್ಮಾಂತರಕ್ಕೆ ಅವರು ನೀಡಿರುವ ವ್ಯಕ್ತವಾದ ಹಾಗೂ ಅವ್ಯಕ್ತವಾದ ಕಾರಣಗಳೇನೇ ಇರಲಿ, ಅವರು ಪ್ರಕಟಿಸಿರುವ ಒಂದು ಅಂಶವಂತೂ ಕೌತುಕವಾಗಿದೆ. ಎಲ್ಲ ಧರ್ಮಗಳಿಗಿಂತ ಮುಸ್ಲಿಂ ಧರ್ಮ ಅವರಿಗೆ ಹೆಚ್ಚಿನ ಸ್ತ್ರೀ ಪರವಾದ, ಪ್ರೀತಿ-ಶಾಂತಿಯನ್ನು ನೀಡುವ ಮತ್ತು ವಿಶೇಷವಾಗಿ ಪ್ರಾಯಶ್ಚಿತ್ತವನ್ನು ನೀಡಿ ಪಾಪ ಕಳೆಸುವ ಧರ್ಮವಾಗಿ ಕಂಡಿದೆ. ನಮ್ಮದು ಒಂದೇ ಚಿಂತೆ-ಇವರು ಅಷ್ಟೊಂದು ಪಾಪಪ್ರಜ್ಞೆಯಿಂದ ನರಳುತ್ತಿರುವುದೇಕೆ?

ಗೌರಿ.

CPMG/KA/BG-8/99

CPMG/KA/BG-8/99

Book-Post/News Letter

To :

Smt/Sri

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

ಮಹಿಳೆಯರ ವಿಚಾರಗಳಿಗೆ ದನಿಯಾಗಿ
ಮಹಿಳಾ ಅಧ್ಯಯನಕ್ಕೆ ವೇದಿಕೆಯಾಗಿ
ಮಹಿಳಾ ಹೋರಾಟಕ್ಕೆ ದಿಕ್ಸೂಚಿಯಾಗಿ
ಅಚಲ